ಶಾಸ್ತ್ರಸಾರದ ಮೇಲಿನ ಹೇಳಿಕೆಯಿಂದ ಸೂಚಿತವಾಗುವಂತೆ ಮೇಲೆ ಕಾಣಿಸಿರುವ ತಿಲೋಯಪಣ್ಣತ್ತಿಯನುಸಾರದ ಒಂದನೇ (೪೬೧ವರ್ಷ) ಕಾಲಗಣನೆಯು ದ್ರಮಿಳ (ಸಂಘ) ಮತದ್ದಾಗಿದೆ, ಎರಡನೇ (೯೭೮೫ವರ್ಷ, ೫ ತಿಂ) ಕಾಲಗಣನೆಯು ಜಾಬುತಿಯ–ಯಾಪನೀಯ(ಸಂಘ)ಮತದ್ದಾಗಿದೆ. (ಇದು ಪಾಠಾಂತರದಂತೆ ೭೮೫ ವರ್ಷ, ೫ ತಿಂಗಳ ಗಣನೆ ಹೊಂದಿದೆ) ಮೂರನೆ ( ೧೪೭೯೩ವರ್ಷ) ಕಾಲಗಣನೆಯು ಕಾಷ್ಟ ಸಂಘಮತದ್ದಾಗಿದೆ, ನಾಲ್ಕನೆಯದು (೬೦೫ ವ. ೫ ತಿಂ) ಶ್ರೀ ಸಂಘದ  ಮತವಾಗಿದೆ ಮತ್ತು ಇದೇ ಸತ್ಯವಾದುದಾಗಿದೆಯೆಂದೂ ಹೇಳಿದೆ. ಇವುಗಳಲ್ಲದೆ ತಿಲೋಯಪಣ್ಣತ್ತಿಯಲ್ಲಿ ಹೇಳಿಲ್ಲದ (೬೭೯ ವರ್ಷಗಳ) ಕಾಲಗಣನೆಯನ್ನು (ಶ್ವೇತ ಪಟ) ಶ್ವೇತಾಂಬರಮತದ್ದೆಂದು ಶಾಸ್ತ್ರಸಾರದಲ್ಲಿ ಹೇಳಿದೆ.

ಶಾಸ್ತ್ರಸಾರದ ಮೇಲಿನ ಉಲ್ಲೇಖದಿಂದ ಸೂಚಿತವಾಗುವಂತೆ, ತಿಲೋಯಪಣ್ಣತ್ತಿ ಯಲ್ಲಿ ಹೇಳಿರುವ ೪೬೧ ವರ್ಷಗಳ ಕಾಲಗಣನೆಯು ದಮಿಳಸಂಘದ ಮತವಾಗಿದೆ ಯಾಗಿ ಈ ಹೇಳಿಕೆಯು ತಿಲೋಯಪಣ್ಣತ್ತಿಯಲ್ಲಿ ದಮಿಳಸಂಘದ ಉದಯದ ಅನಂತರದಲ್ಲಿಯೇ ಉಲ್ಲೇಖಗೊಂಡಿರಬೇಕು. ದೇವಸೇನರ ದರ್ಶನಸಾರದಲ್ಲಿ ಹೇಳಿ ರುವಂತೆ, ವಿಕ್ರಮನು ಮರಣಹೊಂದಿದ ಅನಂತರದ ೫೨೬ನೇ ವರ್ಷದಲ್ಲಿ ಪೂಜ್ಯ ಪಾದಸ್ವಾಮಿಯವರ ಶಿಷ್ಯ ವಜ್ರನಂದಿಯವರಿಂದ ದಕ್ಷಿಣ ಮಥುರೆಯಲ್ಲಿ ದ್ರಾವಿಡ ಸಂಘದ ಸ್ಥಾಪನೆಯಾಗಿದೆ. ಇದರಂತೆ ವಿಕ್ರಮ ಶಕೆ ಆರನೇ ಶತಮಾನದ ಮಧ್ಯಕಾಲದ ಅನಂತರದಲ್ಲಿ ಶಕಕಾಲಾರಂಭದ ಈ ಐತಿಹ್ಯವನ್ನು ತಿಲೋಯಪಣ್ಣತ್ತಿಯಲ್ಲಿ ಹೇಳಿರ ಬೇಕಾಗಿದೆ. ಹೀಗೆಯೇ ತಿಲೋಯಪಣ್ಣತ್ತಿಯಲ್ಲಿ ಹೇಳಿರುವ ೧೪೭೯೩ ವರ್ಷಗಳ ಕಾಲಗಣನೆಯು ಕಾಷ್ಟಸಂಘಮತದ್ದಾಗಿದೆಯಾಗಿ, ಈ ಹೇಳಿಕೆಯು ತಿಲೋಮಪಣ್ಣತ್ತಿ ಯಲ್ಲಿ ಕಾಷ್ಟಸಂಘದ ಉದಯವಾದ ಅನಂತರದಲ್ಲಿಯೇ ಉಲ್ಲೇಖಗೊಂಡಿರಬೇಕು. ಈ ಕಾಷ್ಟಸನ್ಘವು ಗುಣಭದ್ರರ ಪ್ರಶಿಷ್ಯ, ವಿನಯಸೇನರ ಶಿಷ್ಯ ಕುಮಾರಸೇನರಿಂದ ವಿಕ್ರಮನ ಮರಣಾನಂತರದ ೭೫೩ನೇ ವರ್ಷದಲ್ಲಿ ಉದಯಗೊಂದಿದೆ. ಎಂದು ದೇವಸೇನರು ಹೇಳಿದ್ದಾರೆ.[೬೯] ಆದರೆ ಇಲ್ಲಿ ಒಂದುತೊಡಕಿದೆ. ಇಲ್ಲಿ ಹೆಸರಿಸಿರುವ ಕುಮಾರಸೇನರು ಗುಣಭದ್ರರ ಪ್ರಶಿಷ್ಯರು ಎಂಬುದೇ ನಿಜವಿದ್ದಲ್ಲಿ ಇವರ ಕಾಲ

ಸರ್ವಥಾ ವಿಕ್ರಮ ಸಂ. ೭೫೩ನೇ ವರ್ಷವಾಗಿರಲು ಸಾಧ್ಯವಿಲ್ಲ. ಸುಪ್ರಸಿದ್ಧ ಧವಲಾ ಮತ್ತು ಜಯಧವಲಾ ಟೀಕಾರಚನಕಾರದ ವೀರಸೇನರು ಶಕ. ಸಂ. ೭೬೫ರಿಂದ ೭೪೫ (ವಿ. ಸಂ. ೮೦೦ರಿಂದ ೮೮೦)ರ ಮಧ್ಯಕಾಲ್ದಲ್ಲಿ ವಿಕ್ರಮ ಶಕೆ ೯ನೇ ಶತಮಾನದಲ್ಲಿ ಜೀವಿಸಿದ್ದರೆಂದು ನಿರ್ಧರಿಸಲಾಗಿದೆ. (ಕ. ಪಾ. ಪ್ರ. ಪು. ೭೬) ಇದರಂತೆ ಗುಣಭದ್ರರು ಮತ್ತು ಇವರ ಶಿಷ್ಯನು ವಿಕ್ರಮ ಶಕೆ ಹತ್ತನೇ ಶತಮಾನದಲ್ಲಿ ಜೀವಿಸಿದ್ದಿರಬೇಕೆಂದು ಗಣನೆ ಮಾಡಬೇಕಾಗುವುದು. ಆದ್ದರಿಂದ ಕಾಷ್ಟಸಂಘದ ಪ್ರವರ್ತಕ ಕುಮಾರಸೇನರನ್ನು ವಿನಯಸೇನರ ಶಿಷ್ಯರೆಂಬುದಾಗಿ ಒಪ್ಪಲಾಗುವುದಿಲ್ಲ. ಗುಣಭದ್ರಸ್ವಾಮಿಯವರಿಂದ ಶಕ ಸಂ. ೮೨೦ರಲ್ಲಿ (ವಿ. ಸಂ. ೯೫೫) ಮಹಾಪುರಾಣದ ರಚನೆ ಪೂರ್ಣಗೊಡಿದೆ. ಆದ್ದರಿಂದ ಇವರ ಶಿಶ್ಯ ವಿನಯಸೇನರಿಗೆ ವಿ. ಸಂ.

೭೫೩ ರಲ್ಲಿ ಕಾಷ್ಠಾಸಂಘವನ್ನು ಸ್ಥಾಪಿಸಿದರೆಂದು ಹೇಳಲಾಗಿರುವ ಕುಮಾರಸೇನರು ಶಿಷ್ಯರಾಗಿದ್ದರೆಂಬುದು ಸರ್ವಥಾ ಸಂಭವನೀಯವಲ್ಲ. ಈ ಬಗ್ಗೆ ಮತ್ತೂ ಒಂದು ಸಂಗತಿಯನ್ನು ಗಮನಿಸಬೇಕಾಗಿದೆ. ಕಾಷ್ಠಾಸಂಘದ ಸ್ಥಾಪನೆಯಾದ ೨೦೦ ವರ್ಷಗಳ ಬಳಿಕ, ಎಂದರೆ (ವಿ. ಸಂ. ೯೫೩ರಲ್ಲಿ) ರಾಮಸೇನರಿಂದ ಮಾಥುರಸಂಘದ ಪ್ರವರ್ತನೆ ಯಾಯಿತೆಂದು ದೇವಸೇನರೇ ಹೇಳಿದ್ದಾರೆ. ಆದ್ದರಿಂದ ಪ್ರಾಯಿಕವಾಗಿ ಈ ರಾಮ ಸೇನರೇ ವಿನಯಸೇನರ ಛಾತ್ರಶಿಷ್ಯರಾಗಿದ್ದಿರಬಹುದೆಂದು ತಿಳಿಯಬಹುದಗಿದೆ. ದೇವ ಸೇನರ ದರ್ಶನಸಾರದಲ್ಲಿ ವಸ್ತು ನಿರೂಪಣೆಯನ್ನು ಸೂಕ್ಷ್ಮರೀತಿಯಿಂದ ನೋಡುವಾಗ ಕೆಲವು ಗಾಹೆಗಳು ಸ್ಥಲಪರ್ಯಟನೆ ಹೊಂದಿರುವುದು ಕಂಡು ಬರುತ್ತದೆ. ಆದ್ದರಿಂದ ಕಾಷ್ಟಾ ಸಂಘದ ಪ್ರವರ್ತಕ ಕುಮಾರಸೇನರು ಗುಣಭದ್ರರ ಪ್ರಶಿಷ್ಯ, ವಿನಯಸೇನರ ಶಿಷ್ಯರೆನಿಸಿ ತೋರಿಬರುತ್ತಿದೆಯೆಂದು ತಿಳಿಯಬೇಕಾಗಿದೆ. ಆದರಿಂದ ಕಾಷ್ಟಾಸಂಘವು ವಿ.ಸಂ. ೯೫೩ರ ಸಮಯದಲ್ಲಿದ್ದ ಕುಮರಸೇನ ಎಂಬೊಬ್ಬರಿಂದ ಪ್ರವರ್ತಿತವಾಗಿದೆ ಯೆಂದು ತಿಳಿಯುವುದು ಸೂಕ್ತವಾಗುತ್ತದೆ. ಈ ಕುಮಾರಸೇನರು ಹರಿವಂಶ ಪುರಾಣ ಕರ್ತೃ ಪುನ್ನಾಟ ಜಿನಸೇನರಿಂದ ಕಾಣಿಸಲಾಗಿರುವ ಪೂರ್ವಚಾರ್ಯ ಪರಮಪೆರೆಯಲ್ಲಿ ಪ್ರಭಾಚಂದ್ರರ ಗುರುವೆಂದು ಹೇಳ ಲಾಗಿರುವ ಕುಮಾರಸೇನರಾಗಿರಬಹುದಾದ ಸಂಭವವಿದೆ. ಈ ಪುರಾಣದಲ್ಲಿ ಕುಮಾರಸೇನರನ್ನು ಸುಪ್ರಸಿದ್ಧ ವೀರಸೇನಾಚಾರ್ಯ ರಿಂದ ಒಂದು ತಲೆಮಾರಿನಷ್ಟು

ಹಿಂದಿನ ಕಾಲದವರನ್ನಾಗಿ ಅಥವಾ ಹಿರಿಯ ಭ್ರಾತೃ ಗುರು ಕಾಲೀನರನ್ನಾಗಿ ಕಾಣಿಸಲಗಿದೆ. ಆದ್ದಾರಿಂದ ಈ ಕುಮಾರಸೇನರು, ದೇವಸೇನರು ಹೇಳಿರುವಂತೆ, ವಿ. ಸಂ. ೯೫೩ ರ ಸಮಯದಲ್ಲಿದ್ದವರಾಗಿರಬೇಕೆಂದು ತಿಳಿಯಬಹುದಾ ಗಿದೆ. ಪ್ರಸ್ತುತ ಪ್ರಸಂಗದಲ್ಲಿ ಒಂದು ಸಂಗತಿಯನ್ನು ಸ್ಪಷ್ಟಪಡಿಸಬೇಕಾಗಿದೆ. ದೇವ ಸೇನರು ಹೇಳಿರುವ ವಿಕ್ರಮ ಸಂ. ವತ್ತು ಕ್ರಿ. ಪೂ. ೫೮ರಲ್ಲಿ ವಿಕ್ರಮನ ಜನನ ಕಾಲದೊಡನೆ ಸಮೀಕರಣ ಹೊಂದದೆ ಕ್ರಿ. ಪೂ. ೩೩ ಸಮಯಕ್ಕೆ ಸಮೀಕರಣ ಹೊಂದುವುದೆಂದು ಹಿಂದೆ ತಿಳಿಸಿದೆ. ಆದ್ದರಿಂದ ದೇವಸೇನರು ಹೇಳಿರುವ ವಿಕ್ರಮ ಮರಣದಾಧಾರದ ವಿಕ್ರಮ ಸಂವತ್ತು ದೊರೆಯುವುದು. ಇದರಂತೆ ಕುಮಾರ ಸೇನರಿಂದ ಕಾಷ್ಟಾಸಂಘವು ವಿ. ಸಂ. (೭೫೩–೨೫)೭೨೮ರಲ್ಲಿ ಪ್ರವರ್ತಿತವಾಗಿದೆ ಯೆಂದು ತಿಳಿಯಬಹುದಾಗಿದೆ.

ತಿಲೋಯಪಣ್ಣತ್ತಿಯಲ್ಲಿ, ಹಿಂದೆ ಹೇಳಿರುವಂತೆ ಕಾಷ್ಟಾಸಂಘದಮತಾನುಸಾರಿ ಯಾದ ಶಕಕಾಲದ ಉಲ್ಲೇಖವಿರುವುದಾದ್ದರಿಂದ ಈ ಕೃತಿಯ ರಚನೆ ಸಂ. ೭೨೮ರ ಅನಂತರ ಕಾಲದಲ್ಲಿ ಆಗಿರಬೇಕೆಂದು ಗಣನೆ ಮಾಡಬಾಕಾಗುವುದು. ಈ ಗಣನೆಯಂತೆ ತಿಲೋಯಪಣ್ಣತ್ತಿಯ ಕರ್ತೃ ಯತಿವೃಷಭರು ಧವಲಾಟೀಕಾ ಕರ್ತೃ ವೀರಸೇನರಸಮಕಾಲೀನರೆಂದಾಗುವುದು. ಆದರೆ, ಹಿಂದೆ ಹೇಳಿರುವಂತೆ 'ತಿಲೋಯಪಣ್ಣತ್ತಿ' ಯನ್ನು ವೀರಸೇನರು ಆಗಮ–ಸಿದ್ಧಾಂತ ಕೃತಿಗಳ ಸಮಾನವಾಗಿ 'ಸೂತ್ರ' ಎಂದು ಪೂಜ್ಯಭಾವದಿಂದ ಸೂಚಿಸಿರುವರಾದ್ದರಿಂದ, ಅವರ ಸಮಕಲೀನಾರಾಗಿದ್ದರೆಂದು ಸೂಚಿತವಾಗುವ ಯತಿವೃಷಭ ಎಂಬ ಹೆಸರಿನ ಆಚಾರ್ಯರಿಂದ ಇದು ರಚಿತವಾಗಿದೆ ಯೆಂದು ಸರ್ವಥಾ ಒಪ್ಪಲಾಗುವುದಿಲ್ಲ. ಆದ್ದರಿಂದ ಶಕ ಕಾಲಸಂಬಂದಿಯಾದ ವಿಷಯ ಹಾಗೂ ಕಲ್ಕಿ ರಾಜನ ಐತಿಹ್ಯವು ತಿಲೋಯಪಣ್ಣತ್ತಿಯಲ್ಲಿ ಕಾಲಾಂತರದಲ್ಲಿ ಸಂಯೋಜಿತವಾಗಿರುವ ಪ್ರಕ್ಷಿಪ್ತ ಭಾಗವಾಗಿದೆಯೆಂದು ನಿಸ್ಸಂದಿಗ್ಧವಾಗಿ ನಿಶ್ಚಿತ ವಗುವುದು. ಇದರಿಂದ ಈ ಪ್ರಕ್ಷಿಪ್ತ ಭಾಗಗಳಿಲ್ಲದ ತಿಲೋಯಪಣ್ಣತ್ತಿ ಮೂಲ ಕೃತಿಯು ಹಿಂದೆ ಹೇಳಿರುವಂತೆ, ಕುಂದಕುಂದಸ್ವಾಮಿಯವರ ಹಿರಿಯ ಭ್ರಾತೃ ಗುರು ಸಮಾನರಾದ ಮತ್ತು ಚೂರ್ಣಿಸೂತ್ರ ವೃತ್ತಿ ಕರ್ತೃಗಳಾದ ಯತಿವೃಷಭರಿಂದ ರಚಿತ ವಾಗಿದೆಯೆಂದು ಪ್ರಮಾಣೀಕೃತವಗುವುದು. (ಪ್ರಸ್ತುತ ಪ್ರಸಂಗಕ್ಕೆ ಸಂಬಂಧಿಸಿದ ಕಲ್ಕಿ ರಾಜನ ಐತಿಹಾಸಿಕತೆಯನ್ನು ಮಾನ್ಯ ಕಾಶೀಪ್ರಸಾದ ಜಯಸ್ವಾಲರೇ ಮುಂತಾದ ವರು ಪರಿಷ್ಕರಿಸಿರುವುದಾಗಿ

ಹೇಳಲಾಗಿದೆ. ಇದರ ಪರಿಶೀಲನೆಯನ್ನು ಃನೇ ಪರಿಶಿಷ್ಟ ದಲ್ಲಿ ಕೊಡಲಾಗಿದೆ.) ಯತಿವೃಷಭರು ಕುಂದಕುಂದಸ್ವಾಮಿಯವರ ಹಿರಿಯ ಭ್ರಾತೃ ಗುರುವಾಗಿ ಅವರ ಸಮಕಾಲೀನರಾಗಿದ್ದರೆಂದು ನಿಶ್ಚಿತವಾಗಿದೆಯಾಗಿ ಕುಂದಕುಂದ ಸ್ವಾಮಿಯವರಿಗೆ ಎರಡೂ ಆಗಮಗಲು ದೊರಕಿದ್ದವೆಂಬ ಇಂದ್ರನಂದಿಯವರ ಶ್ರುತಾವತಾರದ ಹೇಳಿಕೆಯ ವಿರೋಧಕವಾದ ಕ.ಪಾ. ಪ್ರಸ್ತಾವನಾಕಾರ ವದ್ವಾಂಸರ ಮತ್ತು ಇತರ ಕೆಲವು ವಿದ್ವಾಂಸರ ಅಭಿಪ್ರಾಯಗಳು ನಿರಾಕೃತವಾಗುವುದು.ಇದಲ್ಲದೆ ಇಂದ್ರನಂದಿಯವರು ಕುಂದಕುಂದಸ್ವಾಮಿಯವರ ಅನಂತರದಲ್ಲಿ ಈ ಆಗಮಗಳಿಗೆ ವ್ಯಾಖ್ಯಾನ ಮಾಡಿದ ಆಚಾರ್ಯರ ಅನುಕ್ರಮವನ್ನು ಕುರಿತು ಹೇಳಿರುವ ಇತಿವೃತ್ತದ  ಬಗ್ಗೆ ಏರ್ಪಟ್ಟಿರುವ ಸಂದಿಗ್ಧತೆಯೂ ನಿವಾರಣೆಯಾಗಿದೆ. ಆದರೆ ಇದನ್ನು ಪ್ರಶ್ನಾ ಯತ್ನವಾಗಿಸುವ ವಿಚಾರರ್ಹವಾದ ಒಂದು ಅಂಶವೂ ಇದೆ. ಷಟ್ಖಂಡಾಗಮದ ರಚನೆ ಕಷಾಯಪಾಹುಡದ ಗಾಥಾಸೂತ್ರ ರಚನೆ ಅದರಮೇಲೆ ಯತಿವೃಷಭರ ಚೂರ್ಣಿ ಮತ್ತು ಉಚ್ಛಾರಣಾಚಾರ್ಯರ ಉಚ್ಚಾರಣಾ ವೃತ್ತಿಗಳ ರಚನೆ ಮತ್ತು ಕುಂದಕುಂದ ಸ್ವಾಮಿಯವರಿಂದ ಪರಿಕರ್ಮದ ರಚನೆ, ಮತ್ತೆ ಯತಿವೃಷಭರಿಂದ ಮೌಲಿಕ ತಿಲೋಪಣ್ಣತ್ತಿ ರಚನೆಗಳ ಕಾಲದ ಅವಧಿ ಅತ್ಯಂತ ಸೀಮಿತವಾಗಿದೆ. ಆದ್ದರಿಂದ ಇದಿಷ್ಟು ಅವಧಿಯಲ್ಲಿ ಈ ಎಲ್ಲ ಸಿದ್ದಾಂತಗ್ರಂಥಗಳ ರಚನೆಯಾಗಿರುವುದರ  ಸಂಭಾವ್ಯತೆ ಪ್ರಶ್ನವಾಗುವುದು. ನಿಜ. ಈ ಪ್ರಶ್ನೆ ಸಹಜವಾಗಿದೆ. ಆದರೆ ಈ ಬಗ್ಗೆ ಒಂದು ಮುಖ್ಯ ಅಂಶವನ್ನು ಗಮನಕ್ಕೆ ತಂದುಕೊಳ್ಳಬೇಕಾಗಿದೆ. ನಿಜವೆಂದರೆ ಈ  ಕಾಲವು ನಿರ್ಗ್ರಂಥಧರ್ಮದ ಒಂದು ಪರ್ವಕಾಲವಾಗಿದ್ದಿತೆಂಬುವುದನ್ನು ನೆನಪಿನಲ್ಲಿರಿಸಿ ಕೊಳ್ಳಬೇಕಾಗಿದೆ: (೧) ಮೂರನೇ ಭದ್ರಬಾಹುಸ್ವಾಮಿಯವರಕಾಲದಲ್ಲಿ ನಿರ್ಗ್ರಂಥ ಮುನಿಸಂಘವು ಒಡೆದು ದಿಗಂಬರ ಮತ್ತು ಶ್ವೇತಾಂಬರ ಎಅಂಬ ಎರಡು ಪ್ರತ್ಯೇಕ ಮುನಿಸಂಘಗಳಾಗಿ ಏರ್ಪಟ್ಟಿವೆ. (೨) ಮೂಲತಃ ಶ್ವೇತಾಂಬರ ಸಂಘದ ಅಂಗವಾ ಗಿದ್ದ ಜಿನಕಲ್ಪಿ ಪಂಗಡದ ಅನೇಕ ಮುನಿಗಳು ದಿಗಂಬರಪಂಥದೊಡನೆ ಸಂಮಿಳಿತ ರಾಗಿದ್ದಾರೆ. (೩) ಅರ್ಹದ್ಬಲಿಸ್ವಾಮಿಟ್ಯವರು ದಿಗಂಬರಮುನಿಪಂಗಡವನ್ನು ಸಂಘ ವ್ಯವಸ್ಥೆಯ ಮೂಲಕ ಸಂಘಟಿತವಾದುದನ್ನಾಗಿ ಮತ್ತು ಸುವ್ಯವಸ್ಥಿತವಾದುದನ್ನಾಗಿ  ಮಾಡಲು ಯತ್ನಿಸಿದ್ದಾರೆ.(೪) ಈಗ ಪರಂಪರಾಗತವಾಗಿ ಉಳಿದುಬಂದಿದ್ದ ಆಗಮ ವನ್ನು ಸಾಧ್ಯವಾದಷ್ಟು ಲಿಪಿಬದ್ಧಗೊಳಿಸಿ

ಉಳಿಸಿಕೊಳ್ಳಬೇಕಾದ ತೀವ್ರ ಆವಶ್ಯಕತೆ ಯನ್ನು ಮನಗಾಣವಾಯಿತು. (೫) ಪರಂಪರಾಗತ ಆಗಮವನ್ನು ಕಂಠಸ್ಥವಾಗಿರಿಸಿ ಕೊಂಡು ತಿಳಿದಿದ್ದವರು ಕೇವಲ ಅಲ್ಪಸಂಖ್ಯೆಯವರಾಗಿದ್ದು ಅವರೆಲ್ಲರು ತಗೆ ತಿಳಿದಿದ್ದಷ್ಟು ಆಗಮವನ್ನು ಉಳಿಸಿಕೊಳ್ಳಲು ಯತ್ನಮುಖರಾದರು. ಈ ಯತ್ನದ ಫಲವಾಗಿ ಆಗಮವನ್ನು ಲಿಪಿಬದ್ಧಗೊಳಿಸಲಾಯಿತು. ಈ ರೀತಿಯಿಂದ ಮುನಿಗಳು ತಗೆ ತಿಳಿದಷ್ಟನ್ನೂ ಲಿಪಿಬದ್ಧಗೊಳಿಸಲು ಶಕ್ತಿ ಮೀರಿ ಸಾಧ್ಯವಾದಷ್ಟು ಬೇಗನೆ ಕಾರ್ಯವನ್ನು ಪೂರಯಿಸಲು ಯತ್ನಿಸಿದ್ದಾರೆ. ಈ ರೀತಿಯಾದ ನಿರಂತರ ಮತ್ತು ಶೀಘ್ರಗತಿಯ ಕಾರ್ಯಯೋಜನೆ ಈ ಪರ್ವಕಾಲದಲ್ಲಿ ನಡೆದಿದೆ.ಆದ್ದರಿಂದ ಆಗಮ ಗ್ರಂಥಗಳ ಸಂಕಲನ, ಮತ್ತು ಲಿಪಿಬದ್ಧತೆ ಹೇಗೆ ತಾನೆ ಸೀಮಿತ ಅವಧಿಯಲ್ಲಿ ನಡೆಯಿತೆಂಬ ಪ್ರಶ್ನೆಗೆ ಆ ಅವಧಿಯಲ್ಲಿ ನಡೆದ ತಿವ್ರತರ ಕಾರ್ಯ ಯೋಜನೆಯು ಉತ್ತರವಾಗಿದೆ.     ಶ್ಯಾಮಕುಂಡರ ವ್ಯಾಖ್ಯಾನ: ಕುಂದಕುಂದ ಸ್ವಾಮಿಯವರಿಂದ ಸ್ವಲ್ಪ ಕಾಲ ಕಳೆದ ಮೇಲೆ ಶ್ಯಾಮಕುಂಡ ಎಂಬ ಆಚಾರ್ಯರು ದ್ವಿವಿಧ ಆಗಮವನ್ನು ಪೂರ್ಣ ರೀತಿ ಯಿಂದ ತಿಳಿದು, (ಷಟ್ ಖಂಡಾಗಮದ ) ಮಹಾಬಂಧ ಎಂಬ ಆರನೇ ಖಂಡದ  ಹೊರತಾಗಿ ಎರಡೂ ಸಿದ್ಧಾಂತಗಳಿಗೆ ಪ್ರಾಕೃತ ಸಂಸ್ಕೃತ ಮತ್ತು ಕರ್ಣಾಟ (ಕನ್ನಡ) ಭಾಷೆಗಳಲ್ಲಿ ಹನ್ನೆರಡು ಸಹಸ್ರ ಗ್ರಂಥ ಪ್ರಮಾಣದ ಶ್ರೇಷ್ಠವಾದ 'ಪದ್ಧತಿ' ಎಂಬ ಟೀಕೆಯನ್ನು ರಚಿಸಿದರು.[೬]

ಪದ್ಧತಿ ಎಂದರೆ, ಪ್ರೊ. ಶ್ರೀ ಹೀರಾಲಾಲ್ ಜೈನ್‌ರವರು ಹೇಳಿರುವಂತೆ, ವೃತ್ತಿ ಸೂತ್ರಗಳ ವಿಷಮ ಪದಗಳ ವಿಭಜನೆಯೊಡನೆ, ವಿಶ್ಲೇಷಣಾತ್ಮಕ ವಿವರಣೆ ಮಾಡುವ ಟೀಕೆ. 'ವಿಸಮ ಪಯಾಭಂಜಿಏ ವಿವರಣಾಏ ಪಡ್ಡಇ ವವಏಸಾದೋ'(ಜಯಧವಲಾ, ಪು.೫೨). ಇದರಿಂದ ಶಾಮಕುಂಡರ ಸಂಮುಖದಲ್ಲಿ ಒಂದು ವೃತ್ತಿ ಸೂತ್ರವಿದ್ದಿ ತೆಂದು ಮತ್ತು ಇದಕ್ಕೆ ಇವರು ಪದ್ಧತಿ–ಟೀಕೆಯನ್ನು ರಚಿಸಿರುವರೆಂದು ತಿಳಿಯಬಹುದಾಗಿದೆ. ಕಸಾಯಪಾಹುಡಕ್ಕೆ ಯತಿ ವೃಷಭರು ಚೂರ್ಣಿಸೂತ್ರ ವೃತ್ತಿಯನ್ನು  ರಚಿಸಿದ್ದರೆಂಬುದು ತಿಳಿದ ಸಂಗತಿಯಾಗಿದೆ. ಇದಲ್ಲದೆ ಕುಂದಕುಂದಸ್ವಾಮಿಯವರು 'ಷಟ್ಖಂಡಾಗಮ'ಕ್ಕೆ 'ಪರಿಕರ್ಮ' ಎಂಬ ವೃತ್ತಿಯನ್ನು ರಚಿಸಿರುವರೆಂಬ ಸಂಗತಿಯೂ ತಿಳಿದಿದೆ. ಇದರಿಂದ ಶ್ಯಾಮಕುಂಡರು ಈ ವೃತ್ತಿಗಳಿಗೆ 'ಪದ್ಧತಿ' ಎಂಬ ಟೀಕೆಯನ್ನು ರಚಿಸಿರುವರೆಂದು ತಿಳಿಯಬಹುದಾಗಿದೆ. ಪ್ರಾಕೃತ, ಸಂಸ್ಕೃತ ಮತ್ತು ಕನ್ನಡ ಮಿಶ್ರವಾಗಿದ್ದ

(ಮಣಿಪ್ರವಾಳ ಶೈಲಿಯ?) ಈ ಟೀಕೆಯ ಉಲ್ಲೇಖ ಧವಲಾ ಅಥವಾ ಜಯ ಧವಲಾದಲ್ಲಿ ಕಂಡುಬರುವುದಿಲ್ಲವಾದ್ದರಿಂದ ವೀರಸೇನರಿಗೆ ಹಾಗೂ ಜಿನಸೇನರಿಗೆ ಉಪಲಬ್ಧವಿರಲಿಲ್ಲವೆಂದು ಕಂಡುಬರುತ್ತದೆ. ಆದರೆ ಅವರ ಸಂಮುಖದಲ್ಲಿದ್ದ ಅನ್ಯ ಟೀಕೆಗಳಾಧಾರದಿಂದ ಇವರನ್ನು ಚಿರಂತನ ಆಚಾರ್ಯರಲ್ಲೊಬ್ಬರನ್ನಾಗಿ ಕಾಣಿಸಿ ರುವರೆಂದು ತಿಳಿಯಬಹುದಾಗಿದೆ. ಕನ್ನಡ ಸಾಹಿತ್ಯ ರಚನೆಯ ಬಗ್ಗೆ ಶ್ಯಾಮಕುಂಡರ ಈ ಪದ್ಧತಿಯಟೀಕೆಯು ಅತ್ಯಂತ ಪ್ರಾಚೀನ ದಾಖಲೆಯಾಗಿದೆ.

ಪೂಜ್ಯಪಾದ ಚರಿತೆಯಲ್ಲಿ ಈ ಆಚಾರ್ಯರ ಹೆಸರನ್ನು ಹೇಳದೆಯೇ 'ಮುಂದೆ ಓರ್ವ ಮುನಿಪನು, ಸಂಸ್ಕೃತದಿ ಕರ್ಣಾಟದಿ ಹೇಳಿದನಿನಿತು ಗ್ರಂಥದೊಳು ಈರಾರು ಸಾವಿರ (೧೨,೦೦೦) ವಿನಿ ತೊರೆದನು' ಎಂದು ಹೇಳಿದೆ (೩/೧೩೫–೬).

ಈ ಆಚಾರ್ಯರ ಕಾಲವನ್ನು ಖಚಿತ ರೀತಿಯಿಂದ ನಿರ್ಣಯಿಸಲು ಯುಕ್ತ ಆಧಾರಗಳಿಲ್ಲವಾಗಿವೆ. ಆದರೆ ಇಂದ್ರನಂದಿಯವರು ಹೇಳಿರುವ ವ್ಯಾಖ್ಯಾನಕಾರರ ಅನುಕ್ರಮದಿಂದ ಸೂಚಿತವಾಗುವ ಕಾಲಮರ್ಯಾದೆಯನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ ಕುಂದಕುಂದರ ಮತ್ತು ಶ್ಯಾಮಕುಂಡರ ಮಧ್ಯೆ ಹೆಚ್ಚಿನರಾದ ಕಾಲದ ಅಂತರವಿದ್ದಿರಲಾರದೆಂದು ತಿಳಿಯಬಹುದಾಗಿದೆ.ಇಂದ್ರನಂದಿಯವರು ಈ ಕಾಲದ ಅಂತರವನ್ನು 'ಕಾಲೇಕಿಯತ್ಯಪಿಗತೇ'–'ಸ್ವಲ್ಪಕಾಲ ಕಳೆಯಲು' ಎಂದು ಹೇಳಿದ್ದಾರೆಯಾಗಿ ಈ ಅಂತರಕಾಲವನ್ನು ಸುಮಾರು ಅರುವತ್ತು ಎಪ್ಪತ್ತು ವರ್ಷಗಳ ಅವಧಿ ಯುಳ್ಳದ್ದನ್ನಾಗಿ ಗಣನೆ ಮಾಡಬಹುದು. ಈ ಗಣನೆಯನ್ನು ಸಂಭಾವ್ಯರೀತಿಯಿಂದ ಪುಷ್ಟೀಕರಿಸುವ ಅಂಶವೊಂದನ್ನು ಇಲ್ಲಿ ಪ್ರಸ್ತಾವಿಸುವುದು ಅಸಂಗತವಾಗಲಾರದು.

ಷಟ್ಖಂಡಾಗಮದ (ಗ್ರಂಥ೧) ಮೂರನೇ ಆವೃತ್ತಿ ಸಂಪಾದಕೀಯದಲ್ಲಿ (ಪು. ೩–೧೦) ಆರ್ಯಶ್ಯಾಮರಿಂದ ರಚಿತವಾಗಿರುವ ಪಣ್ಣವಣಾಸೂತ್ರ(ಪ್ರಜ್ಞಾಪನಾಸೂತ್ರ)ಮತ್ತು ಷಟ್ಖಂಡಾಗಮಗಳ ಮಧ್ಯೆ ವಸ್ತುದೃಷ್ಟಿಯಿಂದ ನಿಕಟವರ್ತಿಯಾದ ಸಾದೃಶ್ಯತೆ ಯಿರುವುದನ್ನು ಕಾಣಿಸಿದ್ದಾರೆ. ಇದಲ್ಲದೆ ಪಣ್ಣವಣಾಸೂತ್ರವು ಷಟ್ಖಂಡಾಗಮದರಚನೆಯ ಅನಂತರ ಕಾಲದಲ್ಲಿಯೇ ಆಗಿರುವುದೆಂದು ಯುಕ್ತಿಯುಕ್ತವಾಗಿ ನಿರೂಪಿಸಿದ್ದಾರೆ. ಶ್ವೇತಾಂಬರ ಪಂಥದ ತಪಾಗಚ್ಛಪಟ್ಟಾವಲಿಯಲ್ಲಿ

ಮಹಾಗಿರಿಸೂರಿಯವರ ಶಿಷ್ಯಾನುಕ್ರಮದ ಸ್ವಾತಿಯವರನ್ನು ತತ್ತ್ವಾರ್ಥಸೂತ್ರ ಮುಂತಾದ ಕೃತಿಗಳ ರಚನ ಕಾರರೆಂದೂ ಮತ್ತು ಇವರ ಶಿಷ್ಯರಾದ ಶ್ಯಾಮಾರ್ಯರು ಪ್ರಜ್ಞಾಪನಾಸೂತ್ರ (ಪಣ್ಣವಣಾಸೂತ್ರ)ದ ಕರ್ತೃವೆಂದು ಹೇಳಿ, ಇವರು ವೀ. ನಿ. ಸಂ. ೩೭೬ ಅಥವಾ ೩೮೬ ರಲ್ಲಿ ದಿವಂಗತರಾಗಿರುವರೆಂದು ಹೇಳಿದೆ. ಆದರೆ ತತ್ತ್ವಾರ್ಥಸೂತ್ರ ರಚನಕಾರ ಉಮಾಸ್ವಾತಿಯವರು ವಿಕ್ರಮ ಸಂ. ಮೂರು ಅಥವಾ ನಾಲ್ಕನೇ ಶತಮಾನದ  ಮಧ್ಯಕಾಲದಲ್ಲಿ ಜೀವಿಸಿದ್ದರೆಂದು ಶ್ವೇತಾಂಬರ ಪಂಥದ ಪ್ರಸಿದ್ಧ ವಿದ್ವಾಂಸರಾದ ಮಾನ್ಯ ಪಂ.ಸುಖಲಾಲಜಿ ಸಂಘ್ವಿಯವರು ನಿರ್ಣಯಿಸಿದ್ದಾರೆ.(ತತ್ತ್ವಾರ್ಥಸೂತ್ರ, ಪ್ರಸ್ತಾವನೆ, ಪು. ೨೩) ದಿಗಂಬರ ಪಂಥದ ನಂದಿ ಆಮ್ನಾಯ ಪಟ್ಟಾವಲಿಯನುಸಾರ ಉಮಾಸ್ವಾತಿಯವರು ಕುಂದಕುಂದಸ್ವಾಮಿಯವರ ಅನಂತರ ೪೧ವರ್ಷಕಾಲ ಮುನಿ ಸಂಘದ ಆಚಾರ್ಯ ಪಟ್ಟಸ್ಥರಾಗಿದ್ದರು. ಕುಂದಕುಂದಸ್ವಾಮಿಯವರು ಹಿಂದೆ ನಿರೂಪಿಸಲಾಗಿರುವಂತೆ, ವೀ. ನಿ. ಸಂ. ೭೦೭ರಲ್ಲಿ ಎಂದರೆ ವಿ. ಸಂ. (೭೦೭–೪೭೦=) ೨೩೭ರಲ್ಲಿ ದಿವಂಗತರಾಗಿರುವರಾದ್ದರಿಂದ ಉಮಾಸ್ವಾತಿಯವರು ವಿ. ಸಂ. ೨೭೮ ರಲ್ಲಿ ದಿವಂಗತರಾಗಿದ್ದಾರೆ. ಆದ್ದರಿಂದ ಇವರ ಶಿಷ್ಯರೆಂದು ಹೇಳಲಾಗಿರುವ ಶ್ಯಾಮಾ ರ್ಯರು ವಿಕ್ರಮ ಸಂವತ್ಮೂರನೇ ಶತಮಾನದ ಅಂತ್ಯ ಮತ್ತು ನಾಲ್ಕನೇ  ಶತಮಾನದ ಪೂರ್ವಾರ್ಧ ಸಮಯದಲ್ಲಿ ಜೀವಿಸದ್ದರೆಂದು ತಿಳಿಯಬಹುದಾಗಿದೆ. ಇವರನ್ನು ವಾಚಕಮುನಿ ಸಂತತಿಯವರೆಂದು ಹೇಳಿದೆ. ಆದ್ದರಿಂದ ಇವರು, ಗುಣ ಧರರು, ಆರ್ಯಮಂಕ್ಷು, ನಾಗಹಸ್ತಿ, ಉಮಾಸ್ವಾತಿಯವರೇ ಮುಂತಾದವರಂತೆ ಮೂಲತಃ ಮಹಾಗಿರಿಸೂರಿಯವರ ಅನುಕ್ರಮದ ಜಿನಕ್ಲ್ಪ ಪಂಥದವರಾಗಿದ್ದು ಹಿಂದೆ ಹೇಳಿರುವಂತೆ, ದಿಗಂಬರ ಪಂಥವನ್ನು ಸೇರಿದ ಮುನಿಗಳ ಅನ್ವಯದವರಾಗಿರುವ ರೆಂದು ತಿಳಿಯಬಹುದಾಗಿದೆ.

ತುಂಬುಲೂರಾಚಾರ್ಯರ ವ್ಯಾಖ್ಯಾನ : ಶ್ಯಾಮಕುಂಡರ ಬಳಿಕ (ತಸ್ಮಾದಾರಾತ್) ಸ್ವಲ್ಪ ಕಾಲಕಳೆಯಲು 'ತುಂಬಲೂರು' ಎಂಬ ಗ್ರಾಮದಲ್ಲಿ ತುಂಬುಲೂರಾಚಾರ್ಯ ಎಂಬುವರು ಉದಯಿಸಿದರು. ಇವರು ಷಟ್ಖಂಡಾಗಮದ ಆರನೇ ಖಂಡದ ಹೊರತಾಗಿ (ಷಟ್ಖಂಡಾಗಮ ಮತ್ತು ಕಸಾಯಪಾಹುಡ) ಎರಡೂ ಆಗಮಗಳಿಗೆ (೮೪,೦೦೦) ಎಂಭತ್ತನಾಲ್ಕು ಸಾವಿರ ಗ್ರಂಥ

ಪ್ರಮಾಣದ ಮಹತ್ವಾದ ಚೂಡಾಮಣಿ ಎಂಬ ಹೆಸರಿನ ವ್ಯಾಖ್ಯಾನವನ್ನು ಕನ್ನಡ ಮಾಡಿದರು. ಇದಲ್ಲದೆ ಆರನೆಯ ಖಂಡಕ್ಕೆ ಏಳು ಸಾವಿರ (೭೦೦೦) ಗ್ರಂಥ ಪ್ರಮಾಣದ ಪಂಚಿಕೆಯನ್ನು ರಚಿಸಿದರು.[೬೭] ಹೀಗೆ ಇವರ ವ್ಯಾಖ್ಯಾನದ ಒಟ್ಟು ಪ್ರಮಾಣ ೯೧,೦೦೦ ಗ್ರಂಥ  ಪ್ರಮಾಣವಾಗಿದ್ದಿತು. "ಈ ರಚನೆಗಳು ಧವಲಾ ಮತ್ತು ಜಯಧವಲಾಗಳಲ್ಲಿ ಕಂಡು ಬರುವುದಿಲ್ಲ. ಹೀಗಿದ್ದರೂ ಧವಲಾದಿ ಸಿದ್ಧಾಂತ ಗ್ರಂಥಗಳಲ್ಲಿ ಕೊಡಲಾಗಿರುವ ಮಹಾಧವಲಾ ಪರಿಚಯದಲ್ಲಿ ಪಂಚಿಕೆಯ ರೂಪದ ವಿವರಣೆಯ ಉಲ್ಲೇಖವಿದೆ. 'ವೊಚ್ಛಾಮಿ ಸಂಕತಮ್ಮೇ ಪಂಚಿಯರೂವೇಣ ವಿವರಣಂ ಸುಮಹತ್ಥಂ . . . ॥

ಪುಣೋ ತೇಹಿಂತೋ ಸೇಸಟ್ಠಾರಸಾಣಿಯೋಗದ್ದಾರಾಣಿ ಸಂತಕಮ್ಮೇ ಸವ್ವಾಣಿ ಪರೂ ವಿದಾಣಿ ತೋವಿ ತಸ್ಸ ಗಂಭೀರತ್ತಾದೋ ಅತ್ಥವಿಸಮಪದಾಣಮತ್ಥೇ ಥೋರುದ್ಧ ಯೇಣ ಪಂಚಿಯ ಸರೂವೇಣ ಭಣಿಸ್ಸಾಮೋ (ಷ. ಆಗಮ. ಪುಸ್ತಕ ೧, ಪು. ೪೩) ಇದೇ ಇಂದ್ರನಂದಿಯವರು ಹೇಳಿರುವ ತುಂಬುಲೂರಾಚಾರ್ಯರ ಪಂಚಿಕೆಯಾಗಿದೆ ಯೆಂದು ತಿಳಿಯಬಹುದು" ಎಂದು ಮಾನ್ಯ ಹೀರಾಲಾಲ್ ಜೈನ್ ಅವರು ಹೇಳಿದ್ದಾರೆ.

ತುಂಬುಲೂರಾಚಾರ್ಯರು ೮೪,೦೦೦ ಗ್ರಂಥ ಪ್ರಮಾಣದ 'ಚೂಡಾಮಣಿ' ಎಂಬ ವ್ಯಾಖ್ಯಾನ ಬರೆದಿದ್ದಾರೆಂದು ಇಂದ್ರನಂದಿಯವರು ಹೇಳಿರುವ ಬಗ್ಗೆ ಮಾನ್ಯ ಹೀರಾ ಲಾಲ್ ಜೈನ್ ರವರು ಈ ಮುಂದಿನಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೬೮]

"ಭಟ್ಟಾಕಲಂಕದೇವರು ತಮ್ಮ ಕರ್ಣಾಟಕ ಶಬ್ದಾನುಶಾಸನದಲ್ಲಿ 'ಕನ್ನಡ ಭಾಷೆ ಯಲ್ಲಿ ರಚಿತವಾಗಿರುವ ಚೂಡಾಮಣಿ ಎಂಬ ತತ್ವಾರ್ಥ ಮಹಾಶಾಸ್ತ್ರದ ವ್ಯಾಖ್ಯಾನದ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಈ ವ್ಯಾಖ್ಯಾನದ ಗ್ರಂಥ ಪ್ರಮಾಣವನ್ನು, ಇದರಲ್ಲಿ, ೯೬,೦೦೦ ಎಂದು ಹೇಳಲಾಗಿದ್ದು ಇದು ಇಂದ್ರನಂದಿಯವರು ಹೇಳಿರು ವುದಕ್ಕಿಂತ ಅದಿಕವಾಗಿದೆಯಾದರೂ, ಇದರ ಸೂಚ್ಯಾರ್ಥವು ತುಂಬುಲೂರಾಚಾರ್ಯ ರಚಿತ ಚೂಡಾಮಣಿಯ ಸೂಚಕವಾಗಿದೆಯೆಂದು ಕಂಡು ಬರುತ್ತದೆ." ಮುಂದು ವರಿದು ಸಮಂತಭದ್ರರ ವ್ಯಾಖ್ಯಾನಕ್ಕೆ ಸಂಬಂಧಿಸಿದ ವಿಷಯ ಪ್ರಸ್ತಾವನೆಯಲ್ಲಿ, "ಈ (ಸಿದ್ಧಾಂತ) ಗ್ರಂಥಗಳು ತತ್ವಾರ್ಥಮಹಾಶಾಸ್ತ್ರ ಎಂಬ ಹೆಸರಿನಿಂದಲೂ ಪ್ರಸಿದ್ಧಿ ಹೊಂದಿದ್ದುವು.

ನಾವು ಹಿಂದೆ ಹೇಳಿರುವಂತೆ, ತುಂಬುಲೂರಾಚಾರ್ಯರು ಈ (ಸಿದ್ಧಾಂತ) ಗ್ರಂಥಗಳಿಗೆ ಬರೆದ ಚೂಡಾಮಣಿ ವ್ಯಾಖ್ಯಾನವನ್ನು ಅಕಲಂಕದೇವನು ತತ್ವಾರ್ಥ ಮಹಾಶಾಸ್ತ್ರ ವ್ಯಾಖ್ಯಾನ ಎಂದು ಹೇಳಿದ್ದಾನೆ."

ಇದೇ ವಿಷಯದ ಬಗ್ಗೆ ಕ. ಪಾ. ಪ್ರಸಾವನಾಕಾರರು ವ್ಯಕ್ತಪಡಿಸಿರುವ ಅಭಿಪ್ರಾಯ ವನ್ನೂ ತಿಳಿದುಕೊಳ್ಳಬೇಕಾಗಿದೆ (ಪು. ೧೩-೧೪). ಭಟ್ಟಾಕಲಂಕ ಎಂಬ ಹೆಸರಿನ ವಿದ್ವಾಂಸನೊಬ್ಬನು ತನ್ನ ಕರ್ನಾಟಕ ಶಬ್ದಾನುಶಾಸನದಲ್ಲಿ ಕನ್ನಡ ಭಾಷೆಯಲ್ಲಿ ರಚಿತವಾದ ಚೂಡಾಮಣಿ ಎಂಬ ಹೆಸರಿನ ಮಹಾಶಾಸ್ತ್ರದ ಉಲ್ಲೇಖ ಮಾಡಿದ್ದಾನೆ. ಇದನ್ನು ಅವನು ತತ್ವಾರ್ಥ ಮಹಾಶಾಸ್ತ್ರದ ವ್ಯಾಖ್ಯಾನವೆಂದು ಹೇಳಿ, ಇದರ ಗ್ರಂಥ ಪ್ರಮಾಣವು ೯೬,೦೦೦ವೆಂದು ಹೇಳಿದ್ದಾನೆ. ಆದಾಗ್ಯೂ ಧವಲಾ ಪ್ರಸ್ತಾವನೆಯಲ್ಲಿ ಈ ಚೂಡಾಮಣಿಯು ತುಂಬುಲೂರಾಚಾರ್ಯರಚಿತ ಚೂಡಾಮಣಿಯಾಗಿದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ.

ಶ್ರವಣಬೆಳಗುಳದ ೫೪ನೇ ಶಿಲಾಲೇಖದಲ್ಲಿ ಚೂಡಾಮಣಿ ಎಂಬ ಹೆಸರಿನ ಕಾವ್ಯರಚನಕಾರ ಶ್ರೀವರ್ಧದೇವನನ್ನು ಹೆಸರಿಸಿ ಅವನ ಪ್ರಶಂಸೆಯ ಬಗ್ಗೆ ದಂಡಿಕವಿ ಯದೆಂದು ಹೇಳಿ ಈ ಮುಂದಿನ ಶ್ಲೋಕವನ್ನು ಉದ್ಧೃತ ಮಾಡಿದೆ.

ಚೂಡಾಮಣಿಃ ಕವೀನಾಂ ಚೂಡಾಮಣಿ ನಾಮ ಸೇವ್ಯ ಕಾವ್ಯ ಕವಿಃ।
ಶ್ರೀವರ್ಧದೇವ ಏವ ಹಿ ಕೃತಪುಣ್ಯಃ ಕೀರ್ತಿಮಾಹರ್ತುಂ॥

ಯ ಏವಮುಪಶ್ಲೋಕಿತೋ ದಂಡಿನಾ-

ಜಃಹ್ನೋಃ ಕನ್ಯಾಂ ಜಟಾಗ್ರೇಣ ಬಭಾರ ಪರಮೇಶ್ವರಃ ॥
ಶ್ರೀವರ್ಧದೇವ ಸಂಧತ್ಸೇ ಜಃವಾಗ್ರೇಣ ಸರಸ್ವತೀಂ ॥

ಇದರ ಆಧಾರದಿಂದ ಪ್ರಾಯಶಃ 'ಚೂಡಾಮಣಿ' ಎಂಬ ಹೆಸರಿನ ಸಮಾನತೆಯನ್ನು ಕಂಡು ಕೆಲವು ವಿದ್ವಾಂಸರು ತುಂಬುಲೂರಾಚಾರ್ಯಕೃತ ನಿಜವಾದ ಹೆಸರು 'ವರ್ಧ ದೇವ' ಎಂದು ಕಾಣಿಸಿದ್ದಾರೆ, (ಸಮಂತಭದ್ರ, ಪು. ೧೯೦)

ಶ್ರೀಯುತ ಪೈ ಮಹಾಶಯರು ಹೇಳಿರುವಂತೆ–'ಭಟ್ಟಾಕಲಂಕರ ಸ್ಮರಣೆಯ ಚೂಡಾಮಣಿಯು ತುಂಬೂಲೂರಾಚಾರ್ಯಕೃತ ಚೂಡಾಮಣಿಯಾಗಿರಲಾರದು, ಏಕೆಂದರೆ, ಮೊದಲಿನದು ೯೬,೦೦೦ ಗ್ರಂಥ ಪ್ರಮಾಣದ್ದಾಗಿದೆಯೆಂದು ಕಾಣಿಸಿದೆ ಮತ್ತು ಎರಡನೆಯದು ೮೪,೦೦೦ ಗ್ರಂಥ ಪ್ರಮಾಣದ್ದೆಂದು ಕಾಣಿಸಿದೆ. ಈ ಕಾರಣ ದಿಂದ ಪೈ ಮಹಾಶಯರ ಅಭಿಪ್ರಾಯದ ಪ್ರಕಾರ, ಇಂದ್ರನಂದಿಯವರ ಶ್ರುತಾವ ತಾರದ 'ಕರ್ಣಾಟಕಭಾಷಯಾಕೃತ ಮಹತೀಂ ಚೂಡಾಮಣಿಂ ವ್ಯಾಖ್ಯಾಂ' ಪಂಕ್ತಿಯು ಅಶುದ್ಧವಿದೆ. ಇದರಲ್ಲಿ ಬಂದಿರುವ 'ಚೂಡಾಮಣಿ' ಪದವನ್ನು ಬಿಡಿಸಿ ಬೇರೆಯದಾಗಿ ಓದದೆ ಮುಂದಿನ 'ವ್ಯಾಖ್ಯಾ' ಪದದೊಡನೆ ಸೇರಿಸಿ 'ಚೂಡಾಮಣಿವ್ಯಾಖ್ಯಾಂ' ಎಂದು ಓದಬೇಕೆಂದು ಹೇಳಿದ್ದಾರೆ. ಹೀಗೆ ಓದುವುದರಿಂದ ತುಂಬುಲೂರಾಚಾರ್ಯರು ಕನ್ನಡದಲ್ಲಿ ಚೂಡಾಮಣಿಯ ಒಂದು ದೊಡ್ಡ ವ್ಯಾಖ್ಯಾನ ಮಾಡಿದರು  ಎಂದು ಅರ್ಥಮೂಡುವುದು. ಇದರಿಂದ 'ಶ್ರೀವರ್ಧದೇವರು ತತ್ವಾರ್ಥ ಮಹಾ ಶಾಸ್ತ್ರಕ್ಕೆ ಕನ್ನಡದಲ್ಲಿ ೯೬ ಸಹಸ್ರ ಗ್ರಂಥ ಪ್ರಮಾಣದ ಚೂಡಾಮಣಿಯ ಎಂಬ ವ್ಯಾಖ್ಯಾನ  ಬರೆದಿದ್ದರು ಮತ್ತು ಆ ಚೂಡಾಮಣಿಯ ಮೇಲೆ ತುಂಬೂಲೂರಾಚಾರ್ಯರು ೮೪ಸಾವಿರ ಗ್ರಂಥ ಪ್ರಮಾಣದ ಟೀಕೆ ಬರೆದರು ಎಂದು ಅಭಿಪ್ರಾಯವಾಗುವುದು.

ಈ ಪ್ರಕಾರವಾಗಿ ಪೈ ಮಹಾಶಯರು ವಿಭಿನ್ನ ಉಲ್ಲೇಖಗಳ ಸಮೀಕರಣ ಮಾಡುವ ಪ್ರಯಾಸ ಮಾಡಿದ್ದಾರೆ. ಆದರೆ ಅವರು ತುಂಬುಲೂರಾಚಾರ್ಯರಿಗೆ ಸಂಬಂಧಿಸಿದ, ಶ್ರುತಾವತಾರದ ಮೇಲೆ ಹೇಳಿದ ಶ್ಲೋಕಗಳ ಹೊರತಾಗಿ, ಇತರ ಶ್ಲೋಕಗಳನ್ನು ನೋಡಿಲ್ಲವೆಂದು ಕಂಡುಬರುತ್ತದೆ. ಏಕೆಂದರೆ ಅವರು ತಮ್ಮ ಲೇಖನದಲ್ಲಿ ಉಲ್ಲೇಖ ಮಾಡಿರುವ ಮೇಲೆ ಹೇಳಿದ ಶ್ಲೋಕಗಳನ್ನು ಕರ್ನಾಟಕ ಕವಿಚರಿತೆಯಿಂದ ಉದ್ಧೃತ ಮಾಡಿದ್ದಾರೆ. ಅವರು ಶ್ರುತಾವತಾರವನ್ನು ಪೂರ್ತಿಯಾಗಿ ನೋಡಿದ್ದಲ್ಲಿ 'ಚೂಡಾ ಮಣಿವ್ಯಾಖ್ಯಾಂ' ಎಂಬುದರ ಅರ್ಥವನ್ನು ಚೂಡಾಮಣಿ(ಎಂಬ ಹೆಸರಿನ ಕೃತಿ)ಯ ವ್ಯಾಖ್ಯಾನವೆಂದು ಹೇಳುತ್ತಿರಲಿಲ್ಲ ; ಏಕೆಂದರೆ ಶ್ರುತಾವತಾರದಲ್ಲಿ ಸಿದ್ಧಾಂತ ಗ್ರಂಥಗಳ ವ್ಯಾಖ್ಯಾನಗಳ ವರ್ಣನೆ ಮಾಡಿದೆ, ತತ್ವಾರ್ಥ ಮಹಾಶಾಸ್ತ್ರದ ವ್ಯಾಖ್ಯಾನಗಳಲ್ಲ. ಆದ್ದರಿಂದ ಈ ಹೇಳಿದ (ಶ್ರೀ ಪೈ ಅವರ) ಪ್ರಯಾಸವು ನಿಷ್ಫಲವಾಗಿದೆಯೆಂದು ಸ್ವತಃ ವ್ಯಕ್ತವಾಗುವುದು.

ವಾಸ್ತವವಾಗಿ ಶ್ರೀವರ್ಧದೇವ, ತುಂಬುಲೂರಾಚಾರ್ಯ ಮತ್ತು ಚೂಡಾಮಣಿಗೆ ಸಂಬಂಧಿಸಿದ ಮೇಲೆ ಹೇಳಿದ ವಿಷಯಗಳು ಸಮೀಕರಣ ಮಾಡಲು ಶಕ್ಯವಾಗುವ ಅವಸ್ಥೆಯಲ್ಲಿಲ್ಲ. ಶಿಲಾಲೇಖದಲ್ಲಿ ಶ್ರೀವರ್ಧದೇವರನ್ನು ಚೂಡಾಮಣಿ ಕಾವ್ಯದ ರಚನಕಾರರನ್ನಾಗಿ ಹೇಳಿದೆಯಲ್ಲದೆ 'ಚೂಡಾಮಣಿ' ಎಂಬ ಹೆಸರಿನ ಯಾವುದೇ ವ್ಯಾಖ್ಯೆಯ, ಅದರಲ್ಲಿಯೂ ತತ್ತ್ವಾರ್ಥ ಮಹಾಶಾಸ್ತ್ರದ ವ್ಯಾಖ್ಯೆಯ, ರಚನಕಾರರನ್ನಾಗಿ ಹೇಳಿಲ್ಲ. ಇದಲ್ಲದೆ ದಂಡಿ ಕವಿಯು ಅವರನ್ನು ಪ್ರಶಂಸೆ ಮಾಡಿದ್ದಾರೆ ಎಂಬುದರಿಂದ ಶ್ರೀವರ್ಧದೇವರು ಒಬ್ಬ ಮಹಾನ್ ಕವಿಯಾಗಿದ್ದರೆಂದು ಮತ್ತು ಅವರ ಚೂಡಾ ಮಣಿಯು ಒಂದು ಉತ್ತಮ ಸಂಸ್ಕೃತ ಕಾವ್ಯವಾಗಿದ್ದಿರಬೇಕೆಂದು ಸ್ಪಷ್ಟವಾಗುವುದು.

ಇದೇ ಪ್ರಕಾರ ಭಟ್ಟಾಕಲಂಕರ ಶಬ್ದಾನುಸಾಸನದ ಉಲ್ಲೇಖದಲ್ಲಿ ಯಾವ ದೋಷವೂ ಇಲ್ಲವಾಗಿದ್ದಲ್ಲಿ ಅದು ತುಂಬುಲೂರಾಚಾರ್ಯರ ಚೂಡಾಮಣಿ ವ್ಯಾಖ್ಯೆ ಯನ್ನಧಿಕರಿಸಿರುವ ಹಾಗಿಲ್ಲ, ಏಕೆಂದರೆ (೮೪,೦೦೦ ಮತ್ತು ೯೬,೦೦೦ ಎಂಬುದಾದ) ಗ್ರಂಥ ಪ್ರಮಾಣದ ಅಂತರಕ್ಕೆ ಮಹತ್ತ್ವ ಕೊಡದೆ ಇದ್ದಾಗ್ಯೂ ಅದನ್ನು ಭಟ್ಟಾ ಕಲಂಕರು ತತ್ತ್ವಾರ್ಥ ಮಹಾಶಾಸ್ತ್ರದ ವ್ಯಾಖ್ಯೆ ಎಂದು ಹೇಳಿರುವುದನ್ನು ಮರೆಯು ವಂತಿಲ್ಲ. ಭಟ್ಟಾಕಲಂಕರು ಈ ರೀತಿಯಾಗಿ ಭ್ರಮವಶರಾಗಿ ಹೀಗೆ ಉಲ್ಲೇಖ ಮಾಡಿದ್ದಾರೆಂದು ಹೇಳುವುದಾದಲ್ಲಿ ಅದು ಬೇರೆಯದೇ ಮಾತಾಗುವುದು. ರಾಜಾ ವಲೀಕಥೆಯಲ್ಲಿಯೂ ಕೋಡ ತುಂಬುಲೂರಾಚಾರ್ಯರ ಚೂಡಾಮಣಿ ವ್ಯಾಖ್ಯೆಯ ಉಲ್ಲೇಖವಿದೆ. ಅದರ ಭಾಷೆ ಕನ್ನಡ ಎಂದು ಕಾಣಿಸಿದೆ, ಮತ್ತು ಗ್ರಂಥ ಪ್ರಮಾಣವನ್ನು ೮೪ ಸಾವಿರ ಎಂದೇ ಕಾಣಿಸಿದೆ.

ಭಟ್ಟಾಕಲಂಕರು ಹೇಳಿರುವ 'ತತ್ತ್ವಾರ್ಥ ಮಹಾಶಾಸ್ತ್ರ' ಎಂಬುದು ಸಿದ್ಧಾಂತ ಗ್ರಂಥಗಳ ಸೂಚಕವಾಗಿದೆಯೆಂಬ ಷ. ಆ. ಧವಲಾ ಪ್ರಸ್ತಾವನಾಕಾರರ ಅಭಿಪ್ರಾಯವು ಅನ್ಯ ಆಧಾರಗಳಿಂದ ಸಮರ್ಥಿತವಾದಲ್ಲದೆ, ಭಟ್ಟಾಕಲಂಕರ ಶಬ್ದಾನುಶಾಸನದಲ್ಲಿ ಹೆಸರಿಸಿರುವ 'ಚೂಡಾಮಣಿ'ಯು ತುಂಬುಲೂರಾಚಾರ್ಯರ ಚೂಡಾಮಣಿ ವ್ಯಾಖ್ಯಾನದ ಸೂಚಕವಾಗಿದೆಯೆಂದು ಒಪ್ಪಲಾಗುವುದಿಲ್ಲ ಎಂದು ಕ. ಪಾ. ಪ್ರಸ್ತಾ ವನಾಕಾರರು ಹೇಳಿದ್ದಾರೆ. (ಪು. ೧೪ ಅ. ಟಿ. ೧)

ತುಂಬುಲೂರಾಚಾರ್ಯರು ಶ್ಯಾಮಕುಂಡರ ಬಳಿಕ ಸ್ವಲ್ಪ ಕಾಲಾನಂತರದಲ್ಲಿ ಉದಯಿಸಿದರೆಂದು ಶ್ರುತಾವತಾರದಲ್ಲಿ ಹೇಳಿರುವುದರಿಂದ ಇವರೀರ್ವರ ಮಧ್ಯೆ ಸುಮಾರು ಐವತ್ತು ವರ್ಷಗಳ ಅಂತರವಿರಬಹುದೆಂದು ಮತ್ತು ಇದರಂತೆ ಇವರು ವಿ. ಸಂ. ನಾಲ್ಕನೇ ಶತಮಾನದ ಉತ್ತರಾರ್ಧ ಮತ್ತು ಐದನೇ ಶತಮಾನದ ಆದಿ ಭಾಗದಲ್ಲಿ ಜೀವಿಸಿದ್ದರೆಂದು ಗಣನೆ ಮಾಡಬಹುದಗಿದೆ. ತುಂಬುಲೂರಾಚಾರ್ಯರ ಪ್ರಸ್ತುತ ವ್ಯಾಖ್ಯಾನದ ಬಗ್ಗೆ ಪೂಜ್ಯಪಾದ ಚರಿತೆಯಲ್ಲಿ ಹೇಳಿರುವುದು ಅಷ್ಟಾಗಿಸ್ಪಷ್ಟವಿಲ್ಲ. ಆದರೂ ಇಲ್ಲಿ ಸ್ಪಷ್ಟವಿರುವುದರಷ್ಟನ್ನು ಮತ್ತು ಸಂಭಾವ್ಯವೆನಿಸಿ ಕಂಡು ಬರುವಂತಹುದನ್ನು ಹೇಳುವುದು ಸಮುಚಿತವಿದೆ : 'ಸ್ವಲ್ಪವೂ ಜಾರದ ಜ್ಞಾನವುಳ್ಳ ತುಂಬುಲೂರಾಚಾರ್ಯನನ್ನು ವರ್ಣಿಸಲು ಯಾರಿಗೂ ಸಾಧ್ಯವಿಲ್ಲ . ಆರು ಸಾವಿರ ಗ್ರಂಥ(ಪ್ರಮಾಣ)ದ ವ್ಯಾಖ್ಯಾ ಪ್ರಜ್ಞಪ್ತಿಯನ್ನು ಸರ್ವಬುಧರಿಗೆ ತೋರಿದನು. ಆರು ಖಂಡ ದ್ರವ್ಯ ಲಕ್ಷಣವನ್ನು ವಿಮರ್ಶಿಸಿ (ಶೋಧಿಸಿ) ಬೆಳೆಸಿ (?) ಪ್ರಾಭೃತದಿಂದ ? (ಹಸ್ತಪ್ರತಿಯ ಪ್ರಕಾರ ಪ್ರಾಕೃತದಿಂದ) ಎಂಟು ಸಾವಿರ ಗಾಥಾ ವ್ಯಾಖ್ಯಾನವೆಂದ ನುಂಟಾಗಿ ಆ ಮುನಿಪ ಹೇಳಿದನು ಮತ್ತು ಎಂಟನೇ ಉರ್ವಿ(ಭೂಮಿ)ಯ ಕಾಣಿಸಿದನು, ಕರ್ಮ ಹೆಂಟೆಗಳನೊಡೆವ ತತ್ತ್ವಗಳ ರಚಿಸಿದನು. ತುಂಬುಲೂರು ಗ್ರಾಮ ದಲ್ಲಿಯೇ (?) ಏಳು ಸಾವಿರದ ರಚಿಸಿದನು'[೬೯].

ತುಂಬುಲೂರಾಚಾರ್ಯರ ರಚನೆಗಳ ಬಗ್ಗೆ ಶ್ರುತಾವತಾರ ಮತ್ತು ಪೂ. ಪಾ. ಚರಿತೆಗಳ ಮಧ್ಯೆ ಇರುವ ವ್ಯತ್ಯಾಸವನ್ನು ಕುರಿತು ಪರ್ಯಾಲೋಚನೆ ಮಾಡಬೇಕಾದ ಅಗತ್ಯವಿದೆ. ಶ್ರುತಾವತಾರದ ಹೇಳಿಕೆ ಅತ್ಯಂತ ಸ್ಪಷ್ಟವಿದ್ದು ಸುಗಮವಾಗಿ ತಿಳಿಯಬಹುದಾಗಿದೆ. ಆದರೆ ಪೂ. ಪಾ. ಚರಿತೆಯ ಹೇಳಿಕೆ ಅಷ್ಟಾಗಿ ಸ್ಪಷ್ಟತೆ ಇಲ್ಲದ್ದಾಗಿ ತೊಡಕಿನದಾಗಿದೆ. ಮೊದಲನೆಯದಾಗಿ ತುಂಬುಲೂರಾಚಾರ್ಯರು ೬೦೦೦ ಗ್ರಂಥ ಪ್ರಮಾಣದ ವ್ಯಾಖ್ಯಾ ಪ್ರಜ್ಞಪ್ತಿಯನ್ನು ರಚಿಸಿದರೆಂದು ಪೂ. ಪಾ. ಚರಿತೆಯಲ್ಲಿ ಹೇಳಿರುವುದು ಸಂದಿಗ್ಧತೆಗೆ ಕಾರಣವಾಗಿದೆ. ವ್ಯಾಖ್ಯಾ ಪ್ರಜ್ಞಪ್ತಿಯು ಬಪ್ಪದೇವ ಗುರುವಿನಿಂದಾಯಿತೆಂದು ಶ್ರುತಾವತಾರದಲ್ಲಿ ಹೇಳಿದೆ. ಎರಡನೆಯದಾಗಿ ಎಂಟು ಸಾವಿರ ಗಾಥಾವ್ಯಾಖ್ಯಾನವನ್ನು ತುಂಬುಲೂರಾಚಾರ್ಯರು ಮಾಡಿದರೆಂದು ಹೇಳಿದೆ ಯಾದರೆ ಶ್ರುತಾವತಾರದಲ್ಲಿ ೮೦೦೫ ಗ್ರಂಥ ಪ್ರಮಾಣದ ವ್ಯಾಖ್ಯಾನವನ್ನು ಬಪ್ಪದೇವ ಗುರುವು ಷ. ಆಗಮದ ಆರನೇ ಖಂಡಕ್ಕೆ ಮಾಡಿದರೆಂದು

ಹೇಳಿದೆ. ಈ ಗ್ರಂಥ ಪ್ರಮಾಣದಲ್ಲಿ ಐದು ಗ್ರಂಥ ಪ್ರಮಾಣದ ವ್ಯತ್ಯಾಸವಿದೆ. ಆದರೆ ಬಪ್ಪದೇವ ಗುರುವಿಗೆ ಸಂಬಂಧಿಸಿದ ಐತಿಹ್ಯದಲ್ಲಿ ಒಂದು ವ್ಯಾಖ್ಯಾನ ರಚನೆಯ ಬಗ್ಗೆ ಶ್ರುತಾವತಾರದಲ್ಲಿ ೬೦,೦೦೦ ಗ್ರಂಥ ಪ್ರಮಾಣವನ್ನು ಹೇಳಿದ್ದು ಪೂ. ಪಾ. ಚರಿತೆಯಲ್ಲಿ ೬೦೦೦೫ (ಪಂಚಾಧಿಕಷಷ್ಠಿ ಸಾವಿರ ಸಂಖ್ಯೆ) ಗ್ರಂಥ ಪ್ರಮಾಣವನ್ನು ಹೇಳಿರುವುದರಿಂದ ಈ ಹೇಳಿದ ವ್ಯತ್ಯಾಸದ ಕಾರಣವನ್ನು ಊಹಿಸಬಹುದಾಗಿದೆ. ತುಂಬುಲೂರಾಚಾರ್ಯ ರಿಂದ ರಚಿತವಾದ ೭೦೦೦ ಗ್ರಂಥ ಪ್ರಮಾಣದ ವ್ಯಾಖ್ಯಾನದ ಬಗ್ಗೆ ಮಾತ್ರ ಶ್ರುತಾವತಾರ ಮತ್ತು ಪೂ. ಪಾ. ಚರಿತೆಗಳ ಮಧ್ಯೆ ಮತಭೇದವಿಲ್ಲ. ಆದರೆ ಪೂ. ಪಾ. ಚರಿತೆಯಲ್ಲಿ ೮೪,೦೦೦ ಗ್ರಂಥ ಪ್ರಮಾಣದ ಚೂಡಾಮಣಿ ವ್ಯಾಖ್ಯೆಯ ಬಗ್ಗೆ ಹೇಳಿಕೆ ಇಲ್ಲವಾಗಿರುವುದು ಅತ್ಯಂತ ಗಮನಾರ್ಹವಾದ ಸಂಗತಿಯಾಗಿದೆ. ಈ ಪರಿಶೀಲನೆ ಯಿಂದ ಪೂ. ಪಾ. ಚರಿತೆಯ ತುಂಬೂಲೂರಾಚಾರ್ಯರ ಐತಿಹ್ಯದಲ್ಲಿ ಬಪ್ಪದೇವ ಗುರುವಿಗೆ ಸಂಬಂಧಿಸಿದ ಐತಿಹ್ಯದ ಮಿಶ್ರಣವಾಗಿ ತೊಡಕುಂಟಾಗಿದೆಯೆಂದು ತಿಳಿಯ ಬಹುದಾಗಿದೆ. ಪೂಜ್ಯಪಾದಚರಿತೆಯ ಈ ತೊಡಕಿಗೆ ಹಸ್ತಪ್ರತಿ ಬರೆದ ಲಿಪಿಕಾರರ ಪ್ರಮಾದವು ಕಾರಣವಗಿರಬಹುದಾದ ಸಂಭವವಿಲ್ಲದಿಲ್ಲ.

ಸ್ವಾಮಿ ಸಮಂತಭದ್ರರ ವ್ಯಾಖ್ಯಾನ : ಸಮಂತಭದ್ರರ ವ್ಯಾಖ್ಯಾನದ ಬಗ್ಗೆ ಹೇಳುವ ಮುನ್ನ ಇವರ ಜೀವಿತಕಾಲದ ಸಮಯದಲ್ಲಿ ಆಗಮ–ಸಿದ್ಧಾಂತ ಮತ್ತು ವ್ಯಾಖ್ಯಾನಗಳ ಅಧ್ಯಯನವು ಎಷ್ಟು ವ್ಯಾಪಕವಾಗಿ ನಡೆದಿದ್ದಿತೆಂಬುದರ ಐತಿಹಾಸಿಕ ಸಂಗತಿಯನ್ನು ಗಮನಿಸಬೇಕಾಗಿದೆ. ಶ್ರ. ಬೆಳಗುಳದ ಶಾಸನದಲ್ಲಿ (ಸಂ. ೪೭) ಹೇಳಿರುವಂತೆ, ಕುಂದ ಕುಂದ (ಪದ್ಮನಂದಿ) ಅವರ ಶಿಷ್ಯ ಉಮಾಸ್ವಾತಿ ಗೃದ್ಧ್ರಪಿಂಛ, ಇವರ ಶಿಷ್ಯ ಬಳಾಕ ಪಿಂಛ ; ಇವರಿಗೆ ತರ್ಕ ವ್ಯಾಕರಣಾದಿ ಶಾಸ್ತ್ರ ನಿಪುಣರೂ ಸಾಹಿತ್ಯ ವಿದ್ಯಾಪತಿಯೂ ಆದ ಗುಣನಂದಿ ಪಂಡಿತರು ಶಿಷ್ಯರಾಗಿದ್ದರು. ಇವರಿಗೆ ವಿವೇಕ ನಿಧಿಗಳೂ, ಶಾಸ್ತ್ರಾಬ್ಧಿ ಪಾರಂಗತರೂ ಆದ ಮುನ್ನೂರು ಜನ ಶಿಷ್ಯರಾದರು. ಅವರಲ್ಲಿ ಎಪ್ಪತ್ತೆರಡು ಮುನಿಗಳು ಸಿದ್ಧಾಂತ ಶಾಸ್ತ್ರಾರ್ಥದ ವ್ಯಾಖ್ಯಾನ ಮಾಡುವಲ್ಲಿ ಪಟುಮತಿಗಳಾಗಿದ್ದರು. ಇವರಲ್ಲಿ ನಾನಾಬಗೆಯ ಅನೂನವಾದ ನಯಗಳಲ್ಲಿ ಮತ್ತು ಪ್ರಮಾಣದಲ್ಲಿ ನಿಪುಣನಾದ ದೇವೇಂದ್ರ ಸೈದ್ಧಾಂತಿಕನು ಪ್ರಸಿದ್ಧನಾದನು. ಇವರ ಶಿಷ್ಯ ಕಳಧೌತನಂದಿ ಮುನಿಪ ಸೈದ್ಧಾಂತ ಚಕ್ರೇಶ್ವರ, ಇವರ ಶಿಷ್ಯ ಮಹೇಂದ್ರ

ಕೀರ್ತಿಗೆ ವಾಗ್ದೇವತೆಯು ಆಶ(ಸ)ಕ್ತಳಾಗಿ ಶ್ರೌತೀ (ಶ್ರುತ ಸಂಬಂಧಿ) ಮಾಲೆಯನ್ನು ಹಾಕಿದಳು ಎಂದು ಹೇಳಿದೆ. ('ಯಸ್ಯ ವಾಗ್‌ದೇವತಾ ಶಕ್ತಾ ಶ್ರೌತೀಂ ಮಾಲಾಂ ಅಯೂಯುಜತ್') ಇಲ್ಲಿ ಹೇಳಿರುವ ಪ್ರಕಾರ ಗುಣನಂದಿ ಪಂಡಿತರು ತತ್ತ್ವಾರ್ಥ ಸೂತ್ರ ಕರ್ತೃ ಉಮಾಸ್ವಾಮಿ ಗೃದ್ಧ್ರಪಿಂಛರ ಪ್ರಶಿಷ್ಯರಾಗಿದ್ದಾರೆ. ಸ್ಥೂಲವಾಗಿ ಇವರನ್ನು ತುಂಬುಲೂರಾಚಾರ್ಯರ ಹಿರಿಯ ಕಿರಿಯ ಸಮಕಾಲೀನರೆಂದು ಗಣನೆ ಮಾಡಬಹುದು.

ಇವರ ಮುನ್ನೂರು ಜನ ಶಿಷ್ಯರಲ್ಲಿ ಪ್ರಮುಖರಾದ ದೇವೇಂದ್ರಕೀರ್ತಿಯವರು ತುಂಬುಲೂರಾಚಾರ್ಯರ ಅನಂತರದಲ್ಲಿ ಸಿದ್ಧಾಂತಕ್ಕೆ ವ್ಯಾಖ್ಯಾನ ರಚನೆ ಮಾಡಿದ ಸಮಂತಭದ್ರರ ಸಮಕಾಲೀನರಾಗಿರುವರೆಂದು ಗಣನೆ ಮಾಡಬಹುದಾಗಿದೆ. ಈ ಐತಿಹಾಸಿಕ ಸಂಗತಿಯಿಂದ ಸಮಂತಭದ್ರರ ಪೂರ್ವಾಪರ ನಿಕಟವರ್ತಿ ಸಮಯದಲ್ಲಿ ವ್ಯಾಪಕರೀತಿಯಿಂದ ಆಗಮ–ಸಿದ್ಧಾಂತದ ವ್ಯಾಖ್ಯಾನದ ಅಧ್ಯಯನ ನಡೆದಿದ್ದಿತೆಂದು ಸೂಚಿತವಾಗುವುದು.

ತುಂಬುಲೂರಾಚಾರ್ಯರ ಬಳಿಕ ಕಾಲಾಂತರದಲ್ಲಿ ಆಸಂಧಿ(?)ಯಲ್ಲಿ (ಪಲರ್ ನಲ್ಲಿ ?) ತಾರ್ಕಿಕಾರ್ಕ ಶ್ರೀಮಾನ್ ಸಮಂತ ಭದ್ರನು ಪ್ರಸಿದ್ಧನಾದನು. ಅವನೂ ಕೂಡ ದ್ವಿವಿಧಸಿದ್ಧಾಂತವನ್ನು ಅಧ್ಯಯನ ಮಾಡಿ ಷಟ್ಖಂಡಾಗಮದ ಐದು ಖಂಡಗಳಿಗೆ ೪೮,೦೦೦ ಗ್ರಂಥ ಪ್ರಮಾಣದ ಟೀಕೆಯನ್ನು ಅತಿಮೃದು ಸುಂದರ ಸಂಸ್ಕೃತ ಭಾಷೆಯಲ್ಲಿ ರಚಿಸಿದನು. ದ್ವಿತೀಯ ಸಿದ್ಧಾಂತಕ್ಕೆ ವ್ಯಾಖ್ಯಾನ ಬರೆಯಲು ಉದ್ಯುಕ್ತನಾಗಿರಲು ದ್ರವ್ಯಾದಿ ಶುದ್ಧಿಕರಣ ಪ್ರಯತ್ನವಿಲ್ಲದಿದ್ದ ಕಾರಣದಿಂದ ತನ್ನ ಸಧರ್ಮ ಮುನಿಯೊಬ್ಬ ರಿಂದ ಪ್ರತಿಷಿದ್ಧನಾದನು.[೨೦]

ಇಂದ್ರ ನಂದಿಯವರು ಸಮಂತಭದ್ರರೆನ್ನು 'ತಾರ್ಕಿಕಾರ್ಕ' ಎಂಬ ವಿಶೇಷಣದೊಡನೆ ಹೆಸರಿಸಿರುವುದರಿಂದ ಇವರು ಆಪ್ತಮೀಮಾಂಸ ಮುಂತಾದ ಸುಪ್ರಸಿದ್ಧ ಗ್ರಂಥಕಾರರಾದ ಸಮಂತಭದ್ರರೇ ಆಗಿರುವರೆಂದು ತಿಳಿಯಬಹುದಾಗಿದೆ. ಅಷ್ಟ ಸಹಸ್ರೀ ಟಿಪ್ಪಣಕಾರರೂ ಇವರನ್ನು 'ತಾರ್ಕಿಕಾರ್ಕ' ಎಂದು ಹೇಳಿರುವುದನ್ನು ಈ ಬಗ್ಗೆ ಗಮನಿಸಬಹುದಾಗಿದೆ : (ತದೇವಂ ಮಹಾಭಾಗ್ಯೈಸ್ತಾರ್ಕಿಕಾರ್ಕೈರುಪಜ್ಞಾತಾಂ. . .ಆಪ್ತಮೀಮಾಂಸಾಂ–ಅಷ್ಟಸಹಸ್ರೀ ಪು. ೧ ಟಿಪ್ಪಣಿ).

ಧವಲಾಟೀಕೆಯಲ್ಲಿ ಸಮಂತಭದ್ರರ ಹೆಸರಿನೊಡನೆ ಎರಡು ಅವತರಣಗಳು ದೃಷ್ಟಿಗೋಚರವಾಗಿರುವುದನ್ನು ಧವಲಾ ಪ್ರಸ್ತಾವನಾಕಾರ ಮಾನ್ಯ ಹೀರಾಲಾಲ್ ಜೈನ್ ಅವರು ಮುಂದಿನಂತೆ ಹೇಳಿದ್ದಾರೆ. (ಪು. ೫೦–೫೧)

೧. 'ತಹಾ ಸಮಂತಭದ್ದ ಸಾಮಿಣಾ ವಿ ಉತ್ತಂ ವಿಧಿರ್ವಷಕ್ತ ಪ್ರತಿಷೇಧ ರೂಪ...' (ಬೃಹತ್ ಸ್ವಯಂಭೂ ಸ್ತೋತ್ರ)

೨. 'ತಥಾ ಸಮಂತಭದ್ರಸ್ವಾಮಿನಾಪ್ಯುಕ್ತಂ ಸ್ಯಾದ್ವಾದ ಪ್ರವಿಭಕ್ತಾರ್ಥ ವಿಶೇಷ ವ್ಯಂಜಕೋ ನಯಃ' (ಆಪ್ತ ಮೀಮಾಂಸಾ ಶ್ಲೋ. ೧೦೬)

ಮತ್ತೂ ಕೆಲವು ಅವತರಣಗಳು ಬೃಹತ್ ಸ್ವಯಂಭೂ ಸ್ತೋತ್ರ ಮುಂತಾದವು ಗಳಲ್ಲಿ ಕಂಡು ಬರುವಂತಹವುಗಳು. 'ಉಕ್ತಂಚ' ಎಂಬ ಸೂಚಿಯೊಡನೆ ಬಂದಿವೆ. ಆದರೆ ಷ. ಆಗಮ ಟೀಕೆಯ ಉಲ್ಲೇಖಗಳು ಮಾತ್ರ ಇದುವರೆಗೆ ಎಲ್ಲಿಯೂ ದೃಷ್ಟಿ ಗೋಚರವಾಗಿಲ್ಲ.

ಪುನ್ನಾಟ ಜಿನಸೇನರ ಹರಿವಂಶಪುರಾಣದಲ್ಲಿ ಸಮಂತಭದ್ರವಿರಚಿತ 'ಜೀವ ಸಿದ್ಧಿ'ಯ ಉಲ್ಲೇಖವಿದೆ, ಆದರೆ ಈ ಗ್ರಂಥವು ಇದುವರೆಗೆ ಉಪಲಬ್ಧವಾಗಿಲ್ಲ. ಇದೇ ಷ. ಆಗಮ–ಜೀವಟ್ಠಾಣ ಟೀಕೆಯ ಉಲ್ಲೇಖವಾಗಿರಲಾರದೆ ? ಎಂಬ ಪ್ರಶ್ನೆಯಿದೆ, ತತ್ತ್ವಾರ್ಥ ಅಥವಾ ತತ್ತ್ವಾರ್ಥ ಶಾಸ್ತ್ರದ ಟೀಕೆ, ಸಮಂತಭದ್ರಕೃತವಾದ ಗಂಧಹಸ್ತಿ ಮಹಾಭಾಷ್ಯದ ಉಲ್ಲೇಖಗಳು ಕಂಡುಬರುತ್ತವೆ. ಸಮಂತಭದ್ರರ ಟೀಕೆಯು ವೀರ ಸೇನರ ಸಮಯದವರೆಗೆ ಉಪಲಬ್ಧವಿದ್ದಲ್ಲಿ ಅದರ ಉಲ್ಲೇಖವು ಧವಲಾ ಮತ್ತು ಜಯಧವಲಾಗಳಲ್ಲಿ ಇಲ್ಲವಾಗಿರುವುದು ಆಶ್ಚರ್ಯದ ಸಮಗತಿಯಾಗಿದೆ. (ಷ. ಆ. ಧವಲಾ ಪ್ರಸ್ತಾವನಾ. ಪು. ೫೧).

ಸಮಂತಭದ್ರ ಸ್ವಾಮಿಯವರನ್ನು ಕುರಿತ ಪೂಜ್ಯಪಾದಚರಿತೆಯ ಕಥಾಸಂಗ್ರಹ : ತುಂಬುಲೂರಾಚಾರ್ಯರಾದ ಬಳಿಕ ಕೆಲವು ಕಾಲ ಕಳೆಯಲು ಉಚಿತದ (?) ಮಧ್ಯ ವಿಷಯ(ದೇಶ)ದಲ್ಲಿ ಉತ್ಕಲಿಕಾಗ್ರಾಮ(ದ ಬಳಿಯ) ಮುಣುವಕವಲ್ಲಿ ಗ್ರಾಮದ ಚಿತ್ ಕಲೆಯಂತೆಸತ್ಯವಿಶ್ರುತ ಪಾರಾಯಣ, ಶ್ರುತ ಕುಶಲನು ತಪಸ್ಸನ್ನು ಮಾಡುತ್ತಲಿದ್ದನು. ಅಲ್ಲಿ ಅವನಿಗೆ

ಭಸ್ಮಕ ವಾಹಾವ್ಯಾಧಿ ಮೂಡಿತು. ಈ ರೋಗ ವಾಸಿಯಾಗದುದೆಂದು ಭಾವಿಸಿ ನಿಧಾನ ಮಾಡದೆ ತನ್ನ ಗುರುವಿನ ಬಳಿ ಹೋಗಿ 'ಉಪಸರ್ಗದುರ್ಭಿಕ್ಷ, ಮುಪ್ಪು, ರೋಗಗಳಲ್ಲಿ ವಿಪರೀತವಾದ ಕಷ್ಟದಲ್ಲಿ, ಉಪದೇಶವಿಲ್ಲ ದೆಡೆಯಲ್ಲಿ ಧರ್ಮಕ್ಕಾಗಿ ತನುವನ್ನು ಬಿಡಬೇಕು, ಆದ್ದರಿಂದ ನನಗೆ ಸಲ್ಲೇಖನವನ್ನು ಪಾಲಿಸಬೇಕು'ಎಂದು ಹೇಳಿದನು, ಆಗ ಗುರುವು ಸದಮಲ ಜ್ಞಾನದಿಂದ ತಿಳಿದು, (ನೀನು) 'ಶ್ರೀ ಜಿನಧರ್ಮ ಶ್ರುತವನ್ನು ಹೇಳಲಿರುವೆ, ಆದ್ದರಿಂದ ಬೇಡ, ಎಲ್ಲಿಯಾದರೂ ತೃಪ್ತಿ ಯಾಗುವಂತೆ (ಆಹಾರವನ್ನು) ಭುಂಜಿಸಿದಲ್ಲಿ ಈ ವ್ಯಾಧ್ಯಿನಿಲ್ಲದೆ ಓಡುವುದು, ಅಲ್ಲಿಂದ ಮುಂದೆ ಪುನಃ ದೀಕ್ಷೆ ಕೊಡುವೆವು, ಧೀಮಂತನಿರುವೆ ಹೋಗು' ಎಂದು ಹೇಳಿದರು. ಸಮಂತಭದ್ರರು ಗುರುವನ್ನು ಬೀಳ್ಕೊಂಡು ಕಾಂಚೀಪುರದಲ್ಲಿ ಶಿವಕೋಟಿ ಮಹಾ ರಾಜನ ಬಳಿಹೋಗಿ 'ನೀನು ನಡೆಸುವ ಧರ್ಮವೇನು ಹೇಳು' ಎಂದರು. ಶಿವಕೋಟಿ ರಾಜನು 'ನನ್ನ ಕುಲದೈವಕ್ಕೆ ಅಪ್ರತಿಮವಾದ (ಗುಡಿಯನ್ನು) ಕಟ್ಟಿಸಿರುವೆನು, (ಅದ ರಲ್ಲಿ) ಭೀಮಲಿಂಗಕ್ಕೆ ದಿನಕ್ಕೆ ಹನ್ನೆರಡು ಖಂಡಗ ಅಕ್ಕಿ ಅನ್ನವ ಅರ್ಚನೆ ಮಾಡಲು ಬಿಟ್ಟಿರುವೆನು, ಈ ಧರೆಯಲ್ಲಿ ಬೇರಾರೂ ಮಾಡಲಾಗದಂತಹ ರೀತಿಯಲ್ಲಿ ದಿನವೂ ಪೂಜಿಸುತ್ತಿದ್ದೇನೆ, ಈ ಧರ್ಮ ಸಾಲದೆ ?' ಎಂದನು. ಇದಕ್ಕೆ ಪ್ರತಿಯಾಗಿ 'ಧರ್ಮ ನಡೆಸುವುದು ಧರ್ಮವೇ ? ದೇವರುಂಡರೆ ಸ್ವರ್ಗಗತಿ ಪಡೆಯಬಹುದು, ನಡೆದಂತೆ ನಡೆಸಿ, ಮನುಷ್ಯರು ಉಣ್ಣುವರು, ಇದು ನಡತೆಯೆ ?' ಎಂದು ಆ ಮುನಿಪನೆಂದನು. ರಾಜನು 'ಎಲ್ಲೆ ಯತಿ, ಹುಚ್ಚರಾಡುವ ಮಾತನಾಡಬಹುದೆ ? ನಿಶ್ಚಯದಿಂದ ಶಿಲೆ ಯಲ್ಲವೆ ? ಶಾಂತಿ ನಿಮಿತ್ತವಗಿ ಅರ್ಚಿಸಿ ಜನರುಣತ್ತಿರುವರು, ಮೇದಿನಿ ಮೆಚ್ಚುವಂತೆ ಈ ದಿನದವರೆಗೆ ದಿನಂಪ್ರತಿ ಮನುಷ್ಯರು ಉಂಡಿರುವರು' ಎಂದು ಹೇಳಿದನು –ಸಮಂತಭದ್ರರು 'ಜನಮೆಚ್ಚುವಂತೆ ನಾನು ದೇವರಿಗುಣಿಸುವನು' ಎಂದು ಹೇಳಲು ಚೋದ್ಯಪಟ್ಟ ರಾಜನು, 'ಈ ಪರಿಯಾಗಿ ಶಿವನು ಮನ್ಮಥ ರೂಪಧಾರಣೆ ಮಾಡಿ ಬಂದಿದ್ದಾನೆ' ಎಂದುಕೊಂಡು ;ನೀನು ಹೇಳಿದಂತೆ ಮಾಡು' ಎಂದು ಹೇಳಿದನು ಸಮಂತಭದ್ರರು ಹೋಗಿ (ಗುಡಿಯ) ಕದವನಿಕ್ಕಿ ತಾಪ ಹೊಂದಿದ್ದ ಉದರಕ್ಕೆ ರಾಶಿ ಅನ್ನವನ್ನು ಭಸ್ಮಕವೆಂಬ ಅಗ್ನಿಗೆ ನೀರ ಬಿಡುವಂತೆ ಕೊಟ್ಟು ನಂದಿಸಿದನು. ಹೀಗೆ ಒಂದೆರಡು ದಿನ ಕಳೆಯಲು ರೋಗವು ಕಿರಿಕಿರಿದಗಿ ಕುಂದಿತು. ಇದರಿಂದ ದಿನಂಪ್ರತಿ ಅನ್ನದ ಶೇಷ ಉಳಿಯಲಾಗಿ ಆ ಬಗ್ಗೆ ರಾಜನು ಕೇಳಿದುದಕ್ಕೆ

‘ಭಕ್ತರಿಗಾಗಿ ಪರಶಿವನು ಶೇಷಾನ್ನ ಇರಿಸಿರುವನು’ ಎಂದು ಹೇಳಿದರು. ಆದರೆ ದಿನ್ದಿನಕ್ಕೂ ಶೇಷಾನ್ನ ಹೆಚ್ಚು ತ್ತಿರಲಾಗಿ ರಾಜನು ಗೂಢರೀತಿಯಿಂದ ಒಳಗಡೆ ಒಬ್ಬನನ್ನಿರಿಸಿದನು. ಸಮಂತ ಭದ್ರರು ಅನ್ನವನ್ನುಂಡುದನ್ನು ಕಂಡು ಅವನು ಎಲ್ಲರಿಗೂ ಹೇಳಿದನು. ಮಾರನೆಯ ದಿನ ಶಿವಕೋಟಿ ರಾಜನು ಕದವನ್ನು ಮುರಿದು ಒಳಗೆ ಪ್ರವೇಶಿಸುವುದಾಗಿ ಹೇಳಿ ಬೆದರಿಸಿದನು. ಆಗ ಮುನಿಪನು ಸರ್ವಜ್ಞ ಶರಣೆಂದು ನೆನೆದು ಶಾಸನದೇವಿಯು ತಪಕ್ಕೆ ನಿರ್ವಿಘ್ನ ಮಾಡಿ ತೋರ್ವುದೆಂದು ಮನದಲ್ಲಿ ನೆನೆದು ಇಪ್ಪತ್ತನಾಲ್ಕು ತೀರ್ಥಂಕರರನ್ನು ಸ್ತುತಿಸಲು ಉದ್ಯುಕ್ತನಾದನು. ಆಗ ಬಾಗಿಲನ್ನುತೆಗೆ ಎಂದು ಹೇಳಿ ದುದಕ್ಕೆ ಮುನಿಪತಿಯು ‘ಇದು ನಮ್ಮ ಜಿನಗೃಹ’ವೆಂದು ಹೇಳಿದನು. ’ಆಗಲಿ ನಿನ್ನ ಸತ್ಯವನ್ನೇ ನೋಡುತ್ತೇವೆ’ ಎಂದು ರಾಜನು ಹೇಳಲು ಯೋಗಿಯು ವೃಷಭ ತೀರ್ಥಂ ಕರನಾದಿಯಾಗಿ ಸ್ತುತಿಸಲಾರಂಭಿಸಿದನು. ಮೊದಲ ಏಳು ತೀರ್ಥಂಕರರ (೩೫) ಮುವ್ವತ್ತೈದು ಸ್ತುತಿ ಪದ್ಯಗಳ ಅನಂತರ ಎಂಟನೆಯ (ಚಂದ್ರಪ್ರಭ) ಜಿನಸ್ತುತಿಯ ಐದನೆಯ ಪದ್ಯವನ್ನು ಹೇಳಿದ ಅನಂತರದಲ್ಲಿ ಮುನಿಪನು ತನ್ನ ಮುಂದಿದ್ದ ಸಿಂಹ ಪೀಠದಲ್ಲಿ ಮೂರು ಚಿನ್ನದ ಕಟ್ಟಿನಿಂದೊಡಗೂಡಿದ್ದ ಆಳಿತ್ತರದ ಲಿಂಗವನ್ನು ತೊಟ್ಟ ನೀಕ್ಷಿಸಲು ಕಟ್ಟು ಪಟೀರೆಂದು ಒಡೆದು ಲಿಂಗವು ಸೀಳಿದ ಬಿದಿರಿನಂತಾಯ್ತು. ಅದರಲ್ಲಿ ಸ್ವರ್ಣಮಯನಾದ ಚಂದ್ರಜಿನನುದ್ಭವಿಸಿದನು, ಮೂರು ಪುರುಷ ಪ್ರಮಾಣದ ಜಿನ ಬಿಂಬ ತೋರಿತು. ಎಡಬಲದಲ್ಲಿ ವಿಜಯಯಕ್ಷ ಮತ್ತು ಜ್ವಾಲಿನಿದೇವಿ ಕಂಡು ಬಂದರು. ಆಗ ಮುನಿಪತಿಯು ಬಗಿಲನ್ನುತೆರೆದನು. ಆ ಪೂಜ್ಯನ ಸಾಮರ್ಥ್ಯದಿಂದ ಸೂರ್ಯನು ಉದಯಿಸಿದಂತೆ ಜಿನಬಿಂಬ ಪ್ರಕಾಶನಮಾನವಾಗಿ ಜನಕ್ಕೆ ಕಾಣಿಸಲಾಗಿ ಎಲ್ಲರೂ ಆಶ್ಚರ್ಯದಿಂದ ಎರಗಿದರು. ಇಪ್ಪತ್ತನಾಲ್ಕು ತೀರ್ಥಂಕರರಿಗೆ ಆ ಯೋಗಿ ವರನು ವಂದನೆಗೈದು ಚಿಪ್ಪಳಿದ ಮುತ್ತಿನಂತೆ ಶೋಭಿಸಿದನು. ಶಿವಕೋಟಿ ಮಹಾರಾಜನು ಆ ಮಿನಿವರನಿಗೆರಗಿ ಧರ್ಮಸ್ವರೂ`ವನ್ನು ತಿಳಿದು ದೀಕ್ಷೆಗೊಂಡನು. ಅನೇಕ ಜನರು ಶ್ರಾವಕ ವ್ರತ ಪಡೆದರು. ಯತಿವರನಿಗೆ ಬಲಷ್ಮರೋಗ ಹಿಂಗಿದುದು ಮತ್ತು ಯಕ್ಷಿದೇವಿ ನಿರ್ಮಿಸಿದ ಅತಿಶಯವು ವಿಸ್ಮಯಕಾರಿಯಾದುದಷ್ಟೆ. ಬಳಿಕ ಮುನಿವರನು ಗುರುವಿನ ಬಳಿ ಹೋಗಿ ಪುನರ್ದೀಕ್ಷೆ ಪಡೆದನು. ಸಿದ್ಧಾಂತಗಮ ಷಟ್ಖಂಡ ಪಂಚವ ನುದ್ಧರಿಸಿದನು, ಶತಸಾವಿರ ಗ್ರಂಥವನು ಪೇಳಿ ಸಿದ್ಧಾಂತಿಕನೆನಿಸಿದನು, ಅತಿ ಸುಂದರ ಸಂಸ್ಕೃತದೊಳಗೆ ಬಂಧವ ಮಾಡಿ ಪೇಳ್ದನು, ಬಂಧುರ ದ್ರವ್ಯ

ಶುದ್ಧೀಕರಣಂಗಳನು ಆನಂದದಿಂದ ಬರೆದನು. ಸಂಯಮಿಗಳ ಆ ರತ್ನನು ರತ್ನಕರಂಡಕ ಮೊದಲಾಗಿ ಬರೆದನು. ಶಿವಕೋಟಿ ಆರ್ಯನು ರತ್ನಮಾಲೆಯ ಬರೆದನು. ಇವು ಮೊದಲಾಗಿ ಅನೇಕವ ಪೇಳ್ದನು ವಿವರಿಸಲು ಅತಿ ಜೋಲಿಯಹುದು (ಇಶ್ಲೋ. ಸಂ. ೧೨೯–೧೭೨).

ಶ್ರುತಾವತಾರ ಮತ್ತು ಪೂ. ಪಾ. ಚರಿತೆಗಳ ಮಧ್ಯೆ ಸಮಂತಭದ್ರಸ್ವಾಮಿಯವರ ಐತಿಹ್ಯ ಸಂಗತಿಯಲ್ಲಿ ಕಂಡುಬರುವ ವ್ಯತ್ಯಾಸಗಳು ಪರಿಶೀಲನಾರ್ಹವಾಗಿವೆ.

ಸಮಂತಭದ್ರಸ್ವಾಮಿಯವರ (ವಿಹಾರಕೇಂದ್ರ?) ಸ್ಥಲದ ಬಗ್ಗೆ ಶ್ರುತಾವತಾರದಲ್ಲಿ 'ಆ ಸಂಧ್ಯಾಂ ಪಲರಿ' ಎಂದು ಹೇಳಿದೆ. ಇದು ಅಶುದ್ಧವಿರುವಂತೆ ಕಂಡು ಬರುವುದರಿಂದ ವಾಸ್ತವಿಕತೆ ತಿಳಿದು ಬರುವುದಿಲ್ಲ ಎಂದು ಮಾನ್ಯ ಹೀರಾಲಾಲ್ ಜೈನ್ ಅವರು ಹೇಳಿದ್ದಾರೆ. (ಪೂ. ಸೂ. ಷ. ಅ. ಧ. ಪ್ರಸ್ತವನಾ ಪು. ೫೦) ಆದರೆ ಶ್ರುತಾವತಾರದ ಬೇರೆಯದಾದ ಹಸ್ತಪ್ರತಿಯಲ್ಲಿ 'ಆಸಂದ್ಯಾಂ' ಎಂದಿಷ್ಟೇ ಇದೆ 'ಪಲರಿ' ಎಂಬುದಿಲ್ಲ. ಈ ಹೆಸರಿನ ಸ್ಥಳದ ಬಗ್ಗೆ ಮಾನ್ಯ ಡಾ. ಎ. ಸುಂದರ ಅವರ ಮುಂದಿನ ಹೇಳಿಕೆಯು ಅವಧಾರಣಾರ್ಹವಾಗಿದೆ. ಕದಂಬ ಮನೆತನದ 'ವಿಷ್ಣುವರ್ಮ'ನ (ಕ್ರಿ. ಶ. ೪೬೦–೪೯೦) ಮತ್ತು ಸಿಹವರ್ಮನ (ಕ್ರಿ. ಶ. ೪೯೦–೫೧೬) ಮುಡಿಗರೆ ತಂರಪತ್ರಗಳಲ್ಲಿ ಆಸಂದ್ಯಾಲೂರಿನ ಅರ್ಹದಾಯತನಕ್ಕೆ ಪೂಜೆ ಮುಂತಾದ ಕ್ರಿಯೆಗಳಿಗಾಗಿ ರಾಜರು ಭೂಮಿಯನ್ನು ದತ್ತಿಯಾಗಿ ಕೊಟ್ಟ ಬಗ್ಗೆ ಸ್ಪಷ್ಟ ನಿರ್ದೇಶನವಿದೆ. ಭೂಮಿಯನ್ನು ದತ್ತಿಯಾಗಿ ಕೊಡುವ ಪೂರ್ವಭಾವಿಯಾಗಿಯೇ ಬಸದಿಯು ಅಸ್ತಿತ್ವದಲ್ಲಿದ್ದಿತು. ಇಲ್ಲಿ ಹೇಳಿರುವ 'ಆಸಂಧ್ಯಾಲೂರು' ಎಂಬುದರ ಬಗ್ಗೆ ಅಡಿಟಿಪ್ಪಣಿ(೭)ಯಲ್ಲಿ ಕೊಡಲಾಗಿ ರುವ ವಿಶೇಷ ಮಾಹಿತಿಯೂ ಗಮನಾರ್ಹವಾಗಿದೆ. 'ಆಸಂಧ್ಯಾಲೂರು ಎಂಬುದು ಆ ಸಂದಿ ಮತ್ತು ಆಲೂರು ಎಂಬ ಎರಡು ಸ್ಥಾನಗಳ ಸಂಯುಕ್ತ ಹೆಸರಾಗಿದೆಯೆಂದು ಕಂಡು ಬರುತ್ತದೆ. ಆಸಂದಿಯಿಂದ ಸುಮಾರು ೮ ಕಿ. ಮಿ. ದೂರದಲ್ಲಿ ಆಲದಹಳ್ಳಿ ಎಂಬ ಸಣ್ಣ ಹಳ್ಳಿ ಇದೆ. ತಾಮ್ರಪತ್ರಗಳು ದೊರೆತ ಸ್ಥಳಕ್ಕೆ ಸಮೀಪದಲ್ಲಿ ಕ್ರಿ. ಶ. ೧೧ನೇ ಶತಮಾನದ ವಿಷ್ಣು ದೇವಾಲಯವಿದೆ. ಈ ಸ್ಥಳದ ಪಶ್ಚಿಮದಲ್ಲಿ, ಸಮೀಪದ ಶಾಸನವೊಂದರಲ್ಲಿ ಹೇಳಿರುವಂತೆ, ಆಸಂದಿಯ ಗಂಗರು ಕಟ್ಟಿಸಿದ ಸಿಫೇಶ್ವರ ದೇವಾಲಯವಿದೆ. ಹತ್ತರಿಂದ ಹನ್ನೆರಡನೇ ಶತಮಾನದ ಶಸನಗಳಲ್ಲಿ ಆಸಂದಿ ೩೦೦೦ರ ದಾಖಲಾತಿಯಿದೆ,

'ಆಸಂಧ್ಯಾಲೂರು' ಎಂದಲ್ಲ, ಸಮೀಪಸ್ಥವಾದ ಬೇರೆ ಬೇರೆ ಸ್ಥಳಗಳನ್ನು ಸಂಯುಕ್ತವಾಗಿ ಹೆಸರಿಸಿರುವ ಅನೇಕ ನಿದರ್ಶನಗಳಿವೆ. ಈ  ನಿದರ್ಶನಗಳನ್ನು ಮಾನ್ಯ ಡಾ. ಎ. ಸುಂದರ ಅವರೇ ಕೊಟ್ಟಿದ್ದಾರೆ. ಆದ್ದರಿಂದ 'ಆಸಂದ್ಯಾಲೂರು' ಎಂಬುದು, ಆ ಸಂದಿ ಮತ್ತು ಆಲೂರು ಎಂಬ ಎರಡು ಸ್ಥಳಗಳ ಸಂಯುಕ್ತ ಹೆಸರಾಗಿದೆ.

(ದಿ ಕ್ವಾರ್ಟರ್ಲಿ ಜನರ್ಲ್ ಆಫ್ ದಿ ಮಿಥಿಕ್ ಸೊಸೈಟಿ, (ಬೆಂಗಳೂರು) ಜುಲೈ ಸೆಪ್ಟೆಂಬರ್, ೧೯೮೪ 'ದಿ ಅರ್ಲಿ ಕದಂಬ ಟೆಂಪಲ್ ಆರ್ಕಿಟೆಕ್ಚರ್, ರಿಸೆಂಟ್ ನೋಟಿಸಸ್' ಪು. ೨೬೦–೨೬೯)

ಇಂದ್ರನಂದಿಯವರು ತಮ್ಮ ಶ್ರುತವತರದಲ್ಲಿ ಹೇಳಿರುವ 'ಆಸಂದಿ'ಯು ಈ ಮೇಲೆ ಉಲ್ಲೇಖಿಸಿರುವ ಪ್ರಬಂಧದಲ್ಲಿ ಕಾಣಿಸಲಾಗಿರುವ 'ಆಸಂದಿ'ಯ ಸೂಚಕವಾಗಿರುವ ಸಂಭಾವ್ಯತೆಯಿದೆ. ಪ್ರಸ್ತುತ ಪ್ರಬಂಧದಲ್ಲಿ ಹೇಳಿರುವಂತೆ, ಈ ಸ್ಥಳದಲ್ಲಿ, ಕ್ರಿ. ಶ. ೪೬೦ಕ್ಕಿಂತಲೂ ಹಿಂದಿನಕಾಲದಲ್ಲಿಯೇ ಒಂದು ಅರ್ಹತಾಯನ (ಬಸದಿ)ಯಿದ್ದಿತು. ಇದರಿಂದ ಈ ಸ್ಥಳವು ಜೈನಧರ್ಮೀಯರ ಆವಾಸಸ್ಥಾನವಾಗಿದ್ದು ಮುನಿಗಳ ವಿಹಾರ ಕ್ಷೇತ್ರವಾಗಿದ್ದಿತೆಂಬುದರಲ್ಲಿ ಸಂಶಯ ಪಡುವಂತಿಲ್ಲ. ಬಸದಿಯು ಕ್ರಿ. ಶ. ೪೬೦ ಕ್ಕಿಂತಲೂ ಹಿಂದಿನ ಕಲದ್ದೆಂದು ಹೇಳಿದೆ. ಸಮಂತ ಭದ್ರರ ಜೀವಿತಕಾಲವೂ ಸ್ಥೂಲರೀತಿಯಿಂದ ಇದೇ ಕಲವಾಗಿದೆ. ಆದ್ದರಿಂದ ಆ ಸಂದಿಯು ಸಮಂತಭದ್ರರ ವಿಹಾರ ಕೇಂದ್ರವಾಗಿದ್ದಿತೆಂದು ತಿಳಿಯಲು ಅಡ್ಡಿಯಿಲ್ಲ.

ಶ್ರುತಾವತಾರದ 'ದರಸೇನ ಮತ್ತು ಗಣಧರರ ಅನ್ವಯ ಕ್ರಮವನ್ನು ತಿಳಿಸುವ ಮುನಿಜನರ ಅಭಾವದಿಂದಾಗಿ ಅವರ ಅನ್ವಯಕ್ರಮವು ನಮಗೆ ತಿಳಿದಿಲ್ಲ' ಎಂಬ ಹೇಳಿಕೆಯಿಂದ ಈ ಕೃತಿಯ ಕರ್ತೃವಾದ ಇಂದ್ರನಂದಿಯವರು, ಸಿದ್ದಾಂತ ಗ್ರಂಥಗಳ  ರಚನೆ ಮತ್ತು ಅವುಗಳರಚನೆಯ ಬಗ್ಗೆ, ತಮಗೆ ಸಾಧ್ಯವಾದಷ್ಟು ರೀತಿಯಿಂದ ಐತಿಹಾಸಿಕ ಸಂಗತಿಯನ್ನು ಯತ್ನಿಸಿರುವರೆಂದು ಸ್ಪಷ್ಟವಾಗಿ ಸೂಚಿತವಾಗು ವುದು. ದಿಗಂಬರಮುನಿ ಪರಂಪರೆಯಲ್ಲಿ ಅಪಾರ ಖ್ಯಾತಿವಂತರಾದವರಲ್ಲಿ ಸಮಂತ ಭದ್ರರಿಗೆ ಅಗ್ರಗಣ್ಯ ಸ್ಥಾನವಿದೆ. ಇವರ ಪ್ರಸಿದ್ಧ ಕೃತಿ 'ಆಪ್ತಾಮೀಮಾಂಸಾಕ್ಕೆ ಸುಪ್ರಸಿದ್ಧ ಅಕಲಂಕ ಸ್ವಾಮಿಯವರು ಅಷ್ಟಶತೀ ಎಂಬ ಟೀಕೆ ಬರೆದಿದ್ದಾರೆ. ಪುನ್ನಾಟ ಜಿನಸೇನರು,ಮತ್ತು ಮಹಾಪುರಾಣದ

ಆದಿಪುರಾಣ ರಚನಕಾರ ಜಿನಸೇನಾಚಾರ್ಯರು ಭಕ್ತಿ ಪೂರ್ವಕ ಇವರ ಪ್ರಸ್ತುತಿ ಮಾಡಿದ್ದಾರೆ. ಇವರ ಅತ್ಯಂತ ನಿಕಟವರ್ತಿಕಾಲದಲ್ಲಿ ಜೀವಿಸಿದ್ದ ಇಂದ್ರನಂದಿಯವರಿಗೆ ಸಮಂತಭದ್ರರ ಇತಿವೃತ್ತವು ಯಥಾವತ್ತಾಗಿ ತಿಳಿದಿದ್ದಲ್ಲಿ ಅದು ಅಸಂಭವವೆನಿಸುವುದಿಲ್ಲ.ಆದ್ದರಿಂದ ಸಮಂತ ಭದ್ರರ ವಿಹಾರಕೇಂದ್ರವನ್ನು 'ಆಸಂದಿ' ಎಂದು ಇಂದ್ರನಂದಿಯವರು ಹೆಸರಿಸಿರುವಲ್ಲಿ ಯಾವ ಲೋಪದೋಷವು ಆಗಿಲ್ಲವೆಂದು ಮತ್ತು ಈ ಸ್ಥಳವು ಮೇಲೆ ಹೇಳಿದ ತಾಮ್ರಪತ್ರದಲ್ಲಿ ಹೇಳಲಾಗಿರುವ 'ಆಸಂದಿ' ಎಂಬ ಸ್ಥಳವೇ ಆಗಿದೆ ಎಂದು ಪರಿಗಣನೆ ಮಾಡಲಡ್ಡಿಯಿಲ್ಲ. ಪೂಜ್ಯಪಾದ ಚರಿತೆಯಲ್ಲಿ ಈ ಆಚಾರ್ಯರ ಸ್ಥಳದ ಬಗ್ಗೆ 'ಉಚಿತದಾ ಮಧ್ಯ ವಿಷಯದಿ ಉತ್ಕಲಿಕಾ ಗ್ರಾಮದೊಳಗಿರುತಿಹ . . . ಮಣುವಕವಲ್ಲಿಯ ಗ್ರಾಮ ಚಿತ್ಕಳೆ ಯಂ ತದರೊಳಗೆ' ಎಂಬ ವಿವರ ದೊರೆಯುತ್ತದೆ. ಆದರೆ ಪೂಜ್ಯಪಾದ ಚರಿತೆಯ ಈ ಹೇಳಿಕೆಯಲ್ಲಿ ಪ್ರಮಾದವೇರ್ಪಟ್ಟಿರುವಂತೆ ಕಂಡು ಬರುತ್ತದೆ. ಇದರಲ್ಲಿ ತುಂಬಲೂರು ಆಚಾರ್ಯರಿಗೆ ಸಂಬಂಧಿಸಿದ ಇತಿವೃತ್ತದಲ್ಲಿ ಬಪ್ಪದೇವಗುರುವಿಗೆ ಸಂಬಂಧಿಸಿದ ಸಂಗತಿಗಳು ಬೆರೆತುಕೊಂಡಿರುವ ಸಂಭಾವ್ಯತೆ ಯನ್ನು ಹಿಂದೆ ತಿಳಿಸಿದೆ. ಸಮಂತಭದ್ರರ ಹೆಸರಿನೊಡನೆ ಇಲ್ಲಿ ಹೇಳಿರುವ ಉತ್ಕಲಿಕಾ ಗ್ರಾಮ ಮತ್ತು ಮಣುವಕವಲ್ಲಿ ಗ್ರಾಮಗಳನ್ನು ಬಪ್ಪದೇವ ಗುರುವಿನ ಹೆಸರಿನೊಡನೆ ಹೇಳಿದೆ ಎಂಬುವುದಲ್ಲದೆ ಶ್ರುತಾವತಾರದಲ್ಲಿಯೂ ಬಪ್ಪದೇವ ಗುರುವಿನ ಹೆಸರಿ ನೊಡನೆ ಇದೇ ಗ್ರಾಮ–ಉರುಗಳ ಹೆಸರನ್ನು ಹೇಳಿದೆ. ಆದ್ದರಿಂದ ಸಮಂತಭದ್ರರ ಸ್ಥಳವನ್ನು ಹೆಸರಿಸುವಲ್ಲಿ ಪೂಜ್ಯಪಾದಚರಿತೆಯಲ್ಲಿ ಪ್ರಮಾದವೇರ್ಪಟ್ಟಿದೀಂದು ಮತ್ತು ಹಿಂದೆ ಶ್ರುತಾವತಾರದ ಹೇಳಿಕೆಯಾಧಾರದಿಂದ ಸ್ಪಷ್ಟಪಡಿಸಿರುವಂತೆ ಆಸಂದಿಯೇ ಇವರ ಸ್ಥಳವಾಗಿದೆಯೆಂದು ಪರಿಗಣನೆ ಮಾಡಬಹುದಾಗಿದೆ.

ಸಮಂತಭದ್ರರಿಂದ ಆಗಮಕ್ಕೆ ರಚಿತವಾದ ಟೀಕೆಯ ಬಗ್ಗೆಯೂ ಇರುವ ಭಿನ್ನ ಮತವು ಗಮನಾರ್ಹವಾಗಿದೆ. ಷ. ಆಗಮದ ಐದು ಖಂಡಗಳಿಗೆ ಶತಸಾವಿರ (ಒಂದು ಲಕ್ಷ) ಗ್ರಂಥವನ್ನು ಹೇಳಿ ಸಿದ್ಧಾಂತಕನೆನಿಸಿದನು ಎಂದು ಪೂ. ಪಾ. ಚರಿತೆಯಲ್ಲಿ ಹೇಳಿದೆಯಾದರೆ ಶ್ರುತಾವತಾರದಲ್ಲಿ ೪೮,೦೦೦ ಗ್ರಂಥ ಪ್ರಮಾಣವೆಂದು ಹೇಳಿದೆ. ಇದಲ್ಲದೆ ದ್ವಿತೀಯ ಆಗಮಕ್ಕೆ ಟೀಕೆ ಬರೆಯಲುದ್ಯುಕ್ತನಾದಾಗ 'ದ್ರವ್ಯಾದಿ ಶುದ್ಧೀ ಕರಣ ಪ್ರಯತ್ನ ವಿರಹ'ದ ಕಾರಣದಿಂದ ಸಧರ್ಮಿಮುನಿಯಿಂದ ಪ್ರತಿಷದ್ಧನಾದ

ನೆಂದು ಶ್ರುತಾವತಾರದಲ್ಲಿ ಹೇಳಿದೆಯಾದರೆ ಪೂ. ಪಾ. ಚರಿತೆಯಲ್ಲಿ 'ಬಂಧುರ ದ್ರವ್ಯ ಶುದ್ಧೀಕರಣಗಳಾನಂದದಿ ಬರೆದನಾಮುನಿಪ' ಎಂದು ಹೇಳಿದೆ. ಇದರಿಂದ ದ್ವಿತೀಯ ಆಗಮಕ್ಕೂ ಇವರು ಟೀಕೆ ಬರೆದಿರಬಹುದೆ ? ಎಂಬ ಪ್ರಶ್ನೆಗೆಡೆಯಾಗು ವುದು. ಆದರೆ ಉಪಲಬ್ಧವಿರುವ ಪೂ. ಪಾ. ಚರಿತೆಯ ಹಸ್ತಪ್ರತಿಗಳು ಸಂದೇಹಕ್ಕೆಡೆ ಮಾಡುವ ಅಶುದ್ಧ ಪಾಟಗಳನ್ನೊಳಗೊಂಡಿವೆಯಾದ್ದರಿಂದ ಇಲ್ಲಿ ಹೇಳಿರುವ ಕೆಲ ವಂಶಗಳ ಯಥಾರ್ಥತೆಯನ್ನು ಅನ್ಯ ಹಸ್ತಪ್ರತಿಗಳಾಧಾರದಿಂದ ನಿರ್ಣಯಿಸಬೇಕಾಗಿದೆ.

ದಿಗಂಬರ ಜೈನಮುನಿ ಪರಂಪರೆಯಲ್ಲಿ ಪ್ರಾಚೀನಕಾಲದಿಂದಲೂ ವಿಶೇಷ ರೀತಿ ಯಿಂದ ಸಂಸ್ತುತರಾಗಿರುವ ಮುನಿವರ್ಯರಲ್ಲಿ ಸ್ವಾಮಿ ಸಮಂತಭದ್ರರು ಅಗ್ರಗಣ್ಯರಾಗಿದ್ದಾರೆ. ಇವರ ಜೀವಿತಕಾಲದ ಬಗ್ಗೆ ವಿದ್ವಾಂಸರು ಚರ್ಚೆ ನಡಸಿದ್ದಾರೆ. ಈ ಚರ್ಚೆಗಳಿಗೆ ಮೂಲವಾಗಿರುವ ವಿವಾದದ ಅಂಶಗಳಲ್ಲಿ ಮುಖ್ಯವಾಗಿರುವ ಒಂದು ಅಂಶವನ್ನು ಇಲ್ಲಿ ಪರಿಶೀಲಿಸಬೇಕಾಗಿದೆ. ಸ್ವಾಮಿ ಸಮಂತಭದ್ರರು ತತ್ವಾರ್ಥ ಸೂತ್ರದ ಪ್ರಥಮ ಟೀಕಾಕರ್ತೃಗಳಾದ ದೇವನಂದಿ ಪೂಜ್ಯಪಾದಸ್ವಾಮಿಯವರಿಂದ ಹಿಂದಿನವರೆ ಅಥವಾ ಅನಂತರ ಕಾಲದವರೆ ಎಂಬುದು ವಿವಾದದ ಮುಖ್ಯ ಅಂಶವಾಗಿದೆ. ಸಾಧಾರಣವಾಗಿ ತತ್ವಾರ್ಥ ಸೂತ್ರದ ಪಠಣ ಮಾಡುವಾಗ ಆರಂಭ ದಲ್ಲಿ–

ಮೋಕ್ಷಮಾರ್ಗಸ್ಯನೇತಾರಂ ಭೇತ್ತಾರಂ ಕರ್ಮಭೂಭೃತಾಂ ।
ಜ್ಞಾತಾರಂ ವಿಶ್ವತತ್ವಾನಾಂ ವಂದೇ ತದ್ಗುಣಲಬ್ಧಯೇ ॥

ಎಂಬ ಮಂಗಲಶ್ಲೋಕವನ್ನು ಹೇಳುವ ರೂಢಿಯಿದೆ. ಇದು ತತ್ವಾರ್ಥಸೂತ್ರದ್ದೇಆದ ಮಂಗಲಶ್ಲೋಕವಾಗಿದೆ ಎಂಬುದು ಸಾಧಾರಣವಾಗಿರುವ ಅಭಿಮತ. ಈ ಅಭಿಮತವು ನೂತನವಾದುದಾಗಿರದೆ ಸುಮಾರು ಒಂದು ಸಾವಿರ ವರ್ಷಗಳಷ್ಟು ಪ್ರಾಚೀನ ಕಾಲದಿಂದ ಉಳಿದುಬಂದಿದೆ ಎಂದು ಹೇಳಲು ಆಧಾರವಿದೆ. ಕ್ರಿ. ಶ. ೯ನೇ ಶತಮಾನದ ಸುಪ್ರಸಿದ್ಧ ಶ್ಲೋಕವಾರ್ತಿಕ ಟೀಕೆ ಮತ್ತು ತಾರ್ಕಿಕ ಗ್ರಂಥಗಳ ರಚನಕಾರರಾದ ವಿದ್ಯಾನಂದರು ತಮ್ಮ 'ಆಪ್ತಪರೀಕ್ಷೆ'ಯಲ್ಲಿ ಮಾಲ್ಯಾಣಿಸಿರುವ ಮಂಗಲಶ್ಲೋಕವು ತತ್ವಾರ್ಥಶಾಸ್ತ್ರದ ಮಂಗಲ ಶ್ಲೋಕವಾಗಿದೆಯೆಂದು ಮತ್ತು ಇದನ್ನು ಸ್ವಾಮಿಯವರು ಮೀಮಾಂಸೆ ಮಾಡಿರುವರೆಂದು ಹಾಗೂ

ಇದೇ ಸ್ತೋತ್ರದ ಸತ್ಯವಾಕ್ಯಾರ್ಥ ಸಿದ್ಧಿಯನ್ನು ತಾವು ಶಕ್ಯನುಸಾರ ನಿರೂಪಣೆ ಮಾಡಿರುವುದಗಿ ಹೇಳಿದ್ದಾರೆ.[೭೧] ಇಲ್ಲಿ ವಿದ್ಯಾನಂದರು 'ತತ್ತ್ವಾರ್ಥಶಾಸ್ತ್ರ' ಎಂದು ಹೇಳಿರುವುದರಿಂದ ಅದನ್ನು 'ತತ್ತ್ವಾರ್ಥ ಸೂತ್ರ' ಎಂದು ತಿಳಿಯುವುದಾದರೂ ಹೇಗೆ ? ಎಂಬ ಪ್ರಶ್ನೆ ಸಹಜವಾಗಿ ಮೂಡುವುದು. ಆದರೆ ವಿದ್ಯಾನಂದರು ಈ ಸಂಬಂಧದಲ್ಲಿ ಮೇಲೆ ಕಾಣಿಸಿರುವ 'ಮೋಕ್ಷ ಮಾರ್ಗಸ್ಯ. . . '(ಕಾರಿಕೆ ೩) ಎಂಬ ಶ್ಲೋಕವನ್ನೇ ಉಲ್ಲೇಖಿಸಿ೭೨ ಇದರ ಅರ್ಥವಿವರಣೆ ಮಾಡುತ್ತಾ 'ಶಾಸ್ತ್ರಕರರು ಶಾಶ್ತ್ರಾರಂಭದಲ್ಲಿ ಪರಮೇಷ್ಠಿ ಭಗವಂತನನ್ನು ಮೋಕ್ಷ ಮಾರ್ಗ ಪ್ರಣೇತೃತ್ವಾದಿ ಗುಣಗಳಿಂದ ಸ್ತುತಿಸುವರು 'ಎಂದು ಹೇಳಿದ್ದಾರೆ. ಪುನಃ ಕಾರಿಕೆ ೪ರ ಪ್ರಸ್ತಾವದಲ್ಲಿ ಶಾಸ್ತ್ರಾಕಾರರನ್ನು 'ಭಗವದ್ಭಿಃ' ಎಂಬ ಗೌರವಪದದಿಂದ ಸೂಚಿಸಿದ್ದಾರೆ. ಇದರಿಂದ ಈ ಮಂಗಲ ಶ್ಲೋಕವು ಇವರ ಅಭಿಪ್ರಾಯದಂತೆ ತತ್ತ್ವಾರ್ಥಸೂತ್ರದ ಮಂಗಲಶ್ಲೋಕವೇ ಆಗಿದೆಯೆಂದು ಸ್ಥಿರಪಡುವುದು. ವಿದ್ಯಾನಂದರು ಈ ಮಂಗಲಶ್ಲೋಕವು 'ಸ್ವಾಮಿ ಮಿಮಾಂಸಿತ'ವಗಿದೆ ಎಂದು ಹೇಳಿದ್ದಾರೆ. ಇಲ್ಲಿ 'ಸ್ವಾಮಿ' ಶಬ್ದವು ಸ್ವಾಮಿಸಮಂತಭದ್ರರ ನಿರ್ದೇಶಕವಾಗಿದ್ದು 'ಮೀಮಾಂಸಿತಂ' ಪದವು ಇವರಿಂದ ರಚಿತವಾಗುರುವ ಆಪ್ತಮೀಮಾಂಸಾ ಕೃತಿಯ ಸೂಚಕವಾಗಿ ರುವುದೆಂದು ನಿರ್ಣಯಯಿಸಲಾಗಿದೆ.[೭೩]

ಪ್ರಸ್ತುತ ಮಂಗಲಶ್ಲೋಕವು ತತ್ತ್ವಾರ್ಥಸೂತ್ರದ ಮಂಗಲಶ್ಲೋಕವಾಗಿದೆ ಎಂಬುದು ವಿದ್ಯಾನಂದರ ನಿಶ್ಚಿತ ಅಭಿಪ್ರಾಯವಾಗಿರುವುದಾದರೂ ಇದನ್ನು ಆಧುನಿಕ ವಿದ್ವಾಸಂರು ಒಪ್ಪದೆ ಇದು ದೇವನಂದಿಂಪೂಜ್ಯಪಾದವಿರಚಿತವಾಗಿರುವ ತತ್ತ್ವಾರ್ಥ ಸೂತ್ರದ ಟೀಕೆ, ಸರ್ವಾರ್ಥಸಿದ್ಧಿಯ ಮಂಗಳಶ್ಲೋಕವಾಗಿದೆಯೆಂದು ವಾದ ಮಂಡನೆ ಮಾಡಿದ್ದಾರೆ. ಇದಕ್ಕೆ ಇವರು ಮುಖ್ಯವಾಗಿ ಈ ಮುಂದಿನ ಕಾರಣಗಳನ್ನು ಮುಂದಿಟ್ಟಿದ್ದಾರೆ.

೧. ಈ ಮಂಗಲ ಶ್ಲೋಕವು ಗೃದ್ಧ್ರ ಪಿಂಛಾಚಾರ್ಯ(ಉಮಾಸ್ವಾಮಿಯವ)ರ ತತ್ತ್ವಾರ್ಥಸೂತ್ರದ್ದಾಗಿದ್ದ ಪಕ್ಷದಲ್ಲಿ ಅದು ಪೂಜ್ಯಪಾದಾಚಾರ್ಯರಿಗೆ ಲಭ್ಯವಗಿರ ಬೇಕಿದ್ದಿತು ಮತ್ತು ಅವರು ತತ್ತ್ವಾರ್ಠಸೂತ್ರದ ಸೂತ್ರಗಳಿಗೆ ವ್ಯಾಖ್ಯಾನ ಮಾಡಿದಂತೆ, ಆ ಮಂಗಲಶ್ಲೋಕಕ್ಕೂ ವ್ಯಾಖ್ಯಾನ ಮಾಡಿರಬೇಕಾಗಿದ್ದಿತು ಮತ್ತು ಆ ವ್ಯಾಖ್ಯಾನವು ಸರ್ವಾರ್ಥಸಿದ್ಧಿಯ ಅಂಗವಾಗಿರಬೇಕಾಗಿದ್ದಿತು.

೨. ತತ್ತ್ವಾರ್ಥಸೂತ್ರ ರಚನಕಾರ ಆಚಾರ್ಯರು, ಆತ್ಮನ ಹಿತವನ್ನು ತಿಳಿಸ ಬೇಕೆಂಬುದಾದ ಭವ್ಯನೊಬ್ಬನ ಬೇಡಿಕೆಯ ನಿಮಿತ್ತದಿಂದ ಮೊತ್ತಮೊದಲನೆಯದಾಗಿ 'ಸಮ್ಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ' ಎಂಬ ಸೂತ್ರವನ್ನು ಹೇಳಿದರೆಂದು ಆಚಾರ್ಯ ಪೂಜ್ಯಪಾದರು ಪ್ರಾರಂಭಿಕ ಉತ್ಥಾನಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಿದ್ದಾರೆ. ಇದರಿಂದ ತತ್ತ್ವಾರ್ಥಸೂತ್ರ ರಚನಕಾರರಿಗೆ ಮಂಗಲ ರಚನೆಮಾಡಬೇಕಾದ ಅಗತ್ಯವೇ ಏರ್ಪಡಲಿಲ್ಲ.

೩. ತತ್ತ್ವಾರ್ಥ ವಾರ್ತಿಕಕಾರ ಭಟ್ಟ ಅಕಲಂಕರೂ ಈ ಮಂಗಲಶ್ಲೋಕವನ್ನು ತತ್ತ್ವಾರ್ಥಸೂತ್ರದ್ದೆಂದು ಮಾನ್ಯ ಮಾಡಿಲ್ಲ. ಹಾಗಲ್ಲವಾಗಿದ್ದಲ್ಲಿ ಅವರು ಅವಶ್ಯ ವಾಗಿ ಇದರ ವ್ಯಾಖ್ಯಾನ ಮಾಡುತ್ತಿದ್ದರು. ಇದಲ್ಲದೆ ಇವರು ಸರ್ವಾರ್ಥಸಿದ್ಧಿಯ ಪ್ರಾರಂಭದ, ಪೂಜ್ಯಪಾದರ ಉತ್ಥಾನಿಕೆಯನ್ನು ಸ್ವೀಕಾರ ಮಾಡುವುದಿಲ್ಲ. ತತ್ತ್ವಾರ್ತ ಸೂತ್ರದ ವ್ಯಾಖ್ಯಾಕಾರರೆಂಬ ದೃಷ್ಟಿಯಿಂದ ಆಚಾರ್ಯ ವಿದ್ಯಾನಂದರ ಸ್ಥಿತಿಯು ಭಟ್ಟಾಕಲಂಕರಿಂದ ಭಿನ್ನವಾದುದಾಗಿಲ್ಲ. ಇವರೂ ಕೂಡ ತಮ್ಮ ತತ್ತ್ವಾರ್ಥವಾರ್ತಿಕದಲ್ಲಿ ಈ ಮಂಗಲ ಶ್ಲೋಕದ ವ್ಯಾಖ್ಯಾನ ಮಾಡಿಲ್ಲ. ಇಷ್ಟು ಮಾತ್ರವಲ್ಲ, ಈ ಇಬ್ಬರು ಆಚಾರ್ಯರೂ, ತಮ್ಮ ಭಾಷ್ಯ ಗ್ರಂಥಗಳ ಪ್ರಾರಂಭದಲ್ಲಿ ಅದರ (ಮಂಗಲ ಶ್ಲೋಕದ) ಸಂಕಲನವನ್ನೂ ಮಾಡಿಲ್ಲ. ಪ್ರಸ್ತುತ ಮಂಗಲಶ್ಲೋಕವು, ತತ್ತ್ವಾರ್ಥಸೂತ್ರದ್ದಾಗಿದೆ ಅಥವಾ ಆಗಿಲ್ಲ ಎಂಬ ಈ ಎರಡು ಮತಗಳಲ್ಲಿ ಮೊದಲನೆಯದಾದ ವಿದ್ಯಾನಂದರ ಅಭಿಮತವನ್ನು ಪುಷ್ಟೀಕರಿಸುವ ಅನ್ಯ ಪ್ರಬಲ ಪ್ರಮಾಣ ದೊರೆಯುವುದಿಲ್ಲವಾದ್ದರಿಂದ ಎರಡನೆಯದನ್ನುತಾವು ಅಂಗೀಕರಿಸುವುದಾಗಿ ಹೇಳಿ, ಈ ಮಂಗಳ ಶ್ಲೋಕವು ಪೂಜ್ಯಪಾದರ ಸವಾರ್ಥಸಿದ್ಧಿಯ ಪ್ರಾರಂಬದಲ್ಲಿ ದೊರೆಯುವುದಾದ್ದರಿಂದ ಇದು ಸರ್ವಾರ್ಥಸಿದ್ಧಿಯ ಅಂಗವಾಗಿರುವುದೆಂದು ಪಂ. ಫೂಲ್ ಚಂದ್ರ ಸಿದ್ಧಾಂತ ಚಕ್ರವರ್ತಿಯವರು ತಮ್ಮ ಅಭಿಮತವನ್ನು ವ್ಯಕ್ತಪಡಿಸಿದ್ದಾರೆ.[೭೪]

ಪ್ರಸ್ತುತ ಮಂಗಲಶ್ಲೋಕವು ಮೇಲ್ಕಂಡ ಎರಡನೆಯ ಮತದಂತೆ, ಪೂಜ್ಯಪಾದ ಸರ್ವಾರ್ಥಸಿದ್ದಿಟೀಕೆಯ ಮಂಗಲವಗಿದ್ದು ಈ ಮಂಗಲ ಶ್ಲೋಕದಆಧಾರದಿಂದ, ವಿದ್ಯಾನಂದರು ಹೇಳಿರುವಂತೆ, ಸ್ವಾಮಿ ಸಮಂತಭದ್ರರು 'ಆಪ್ತಮೀಮಾಂಸಾ'(ದೇವಾಗಮ) ಕೃತಿಯನ್ನು ರಚಿಸಿರುವರೆಂದಾದಲ್ಲಿ ಸ್ವಾಮಿ ಸಮಂತಭದ್ರರು ಪೂಜ್ಯಪಾದ ಸ್ವಾಮಿಯವರಿಂದ ಇತ್ತೀಚಿನವರು

ಅಥವಾ ಅವರ ಹಿರಿಯ ಸಮಕಾಲೀನರಾದರೂ ಆಗಿರುವರೆಂದು ತಿಳಿಯಬೇಕಾಗುವುದು. ಇದು ಆಧುನಿಕ ವಿದ್ವಾಂಸರಲ್ಲಿ ಕೆಲವರ ಅಭಿಮತವೂ ಆಗಿದೆ. ಆದರೆ ಪ್ರಸುತ್ತ ಮಂಗಲಶ್ಲೋಕವು ತತ್ವಾರ್ಥ ಸೂತ್ರದ್ದಾಗಿದೆಯೆಂಬ ವಿದ್ಯಾನಂದರ ಹೇಳಿಕೆಯು ಅನ್ಯ ಆಧಾರಗಳ ಅಭಾವದ ಕಾರಣದಿಂದ ಪುಷ್ಟೀಕೃತವಾಗುವುದಿಲ್ಲ, ಆದ್ದರಿಂದ ಅದು ಅವರ ತಪ್ಪುಗ್ರಹಿಕೆಯಾಗಿದೆಯೆಂದು ತಿಳಿಯಬಹುದಾದಲ್ಲಿ ಈ ಮಂಗಲಶ್ಲೋಕವನ್ನೇ ಆಧರಿಸಿ ಸ್ವಾಮಿಸಮಂತಭದ್ರರು ಅವರ 'ಆಪ್ತಮೀಮಾಂಸಾ' ಕೃತಿಯನ್ನು ರಚಿಸಿರುವರೆಂಬ ವಿದ್ಯಾನಂದರ ಅಭಿಪ್ರಾಯವೂ ಅವರ ತಪ್ಪುಗ್ರಹಿಕೆಯಾಗಿರಬಾರದೇಕೆ ? ಎಂಬುದನ್ನು ಪರ್ಯಾಲೋಚನೆ ಮಾಡಬೇಕಾದ ಅಗ್ಯತವಿದೆ. ಈ ಬಗ್ಗೆ ವಿದ್ಯಾನಂದರ 'ಆಪ್ತಪರೀಕ್ಷಾ' ಕೃತಿಯ ಮಾನ್ಯ ಸಂಪಾದಕ ಮತ್ತು (ಹಿಂದೀ) ಅನುವಾದಕರಾದ ನ್ಯಾಯಾಚಾರ್ಯ ಪಂಡಿತ ದರ್ಬಾರೀ
ಲಾಲ್ ಜೈನ್ ಕೋಠಿಯಾ ಅವರ ವಿಚಾರಪೂರ್ಣ ಅಭಿಪ್ರಾಯವು ಅವಶ್ಯವಾಗಿ ಗಮನಿಸಬೇಕಾದಂತಹುದಾಗಿದೆ.[೭೫]

"ಸಮಂತಭದ್ರರು ಈ ಹೇಳಿದ ಮಂಗಲ ಶ್ಲೋಕದ ಆಧಾರದಿಂದಲೇ ಅವರ 'ಆಪ್ತಾಮೀಮಾಂಸಾ' ಕೃತಿಯನ್ನು ರಚಿಸಿರುವರೆಂದು ವಿದ್ಯಾನಂದರು ತಿಳಿಯುತ್ತಾರೆ. ಆದರೆ ವಿದ್ಯಾನಂದರ ಈ ಕಥನದ ಪುಷ್ಟಿಯಾಗುವುದಿರಲಿ, ಇದರ ಸಂಕೇತವೂ ಆಪ್ತಮೀಮಾಂಸಾದಿಂದ ದೊರೆಯುವುದಿಲ್ಲ ಅಥವಾ ಬೇರಾವ ಮೂಲದಿಂದಾಗಲೀ ವುದ್ಯಾನಂದರ ಅಭಿಪ್ರಾಯದ ಸಮರ್ಥನೆಯಾಗುವುದಿಲ್ಲ. ಸ್ವಾಮಿ ಸಮಂತಭದ್ರರು ತಮ್ಮ (ಕೃತಿಯಲ್ಲಿ) ಆಪ್ತನನ್ನು 'ನಿರ್ದೋಷ' ಪದದ ಮೂಲಕ 'ಕರ್ಮ ಭೂಭೃತ್' ವನ್ನುಉ ಕಾಣಿಸುವುದು ಅವರ ಅಭೀಷ್ಟವಾಗಿದ್ದು ಈ ಎರಡು ಅರ್ಥಗಳ ಸಿದ್ಧಿ ಮಾಡಿದ್ದಾರೆ. ನಿಜ, ಆದರೆ ಅವರು 'ಯುಕ್ತಿಶಾಸ್ತ್ರಾವಿರೋಧಿವಾಕ್' ಎಂಬುದರ ಸಮರ್ಥಯಲ್ಲಿಯೇ ತಮ್ಮ ಎಲ್ಲ ಶಕ್ತಿಯನ್ನು ಉಪಯೋಗಿಸಿದ್ದಾರೆ. ಕರ್ಮ ಭೂಭೃತ್ ಭೇತ್ತೃತ್ವ ಮತ್ತು ಸರ್ವಜ್ಞತ್ವಗಳಿಂದ ಅವರ ಆಪ್ತನು ಆಪ್ತನೆನಿಸಿರುವದಲ್ಲ ; ಆದರೆ, ಅವನ 'ಇಷ್ಟ'ವು 'ಪ್ರಸಿದ್ಧ'ದಿಂದ ಬಾಧಿತವಾಗುವುದಿಲ್ಲವಾದ್ದರಿಂದ ಆಪ್ತನೆನಿಸಿಕೊಂಡಿದ್ದಾನೆ. ಸಮಂತಭದ್ರರು ತಮ್ಮ ಆಪ್ತನ ಇದೇ ವೈಶಿಷ್ಟ್ಯ (ಸ್ಯಾದ್ವಾದ)ವನ್ನು ಅನುಸ್ಯೂತ ರೀತಿಯಿಂದ ತೋರುತ್ತಾರೆ. ಅದರ

ಸಮರ್ಥನೆ ಮಾಡುತ್ತಾರೆ. ಹೀಗೆ ೧೧೩ನೇ ಕಾರಿಕೆವರೆಗೆ ಹೋಗಿ ತಲುಪುತ್ತಾರೆ. 'ಇತಿ ಸ್ಯಾದ್ವಾದ ಸಂಸ್ಥಿತಿಃ' ಎಂಬುದು ಈ ಕಾರಿಕೆಯ ಅಂತಿಮ ಚರಣವಾಗಿದೆ. ಈ 'ಸ್ಯಾದ್ವಾದ ಸಂಸ್ಥಿತಿ'ಯೇ ಅವರ ಅಭೀಷ್ಟವಾಗಿದೆ, ಮತ್ತು ಇದೇ ಆಪ್ತಮೀಮಾಂಸಾಕೃತಿಯ ಮುಖ್ಯ ಪ್ರತಿಪಾದ್ಯ ವಿಷಯ ಎಂಬುದಷ್ಟೇ ಅಲ್ಲ. ಏಕಮಾತ್ರ ಪ್ರತಿಪಾದ್ಯ ವಿಷಯವೂ ಆಗಿದೆ. ಇದರ ಬಳಿಕ, ಕೊನಯದಾದ ೧೧೪ನೇ ಕಾರಿಕೆಯಲ್ಲಿ 'ಹಿತೇ ಚ್ಛು'ಗಳಿಗೆ ಸಂಯಕ್ ಮತ್ತು ಮಿಥ್ಯಾ ಉಪದೇಶಗಳ ಭೇದವನ್ನು ತಿಳಿಸುವುದಕ್ಕಾಗಿ ಈ 'ಆಪ್ತ ಮೀಮಾಂಸಾ' ಕೃತಿಯ ರಚನೆ ಮಾಡಲಾಗಿದೆಯೆಂದು ಹೇಳಿದ್ದಾರೆ.

ಆಪ್ತಮೀಮಾಂಸೆಗೆ ಅಷ್ಟಶತೀ (ಟೀಕೆ) ರಚನಕಾರರಾದ ಭಟ್ಟಾಕಲಂಕದೇವರೂ ಕೂಡ ಈ (ಹಿಂದೆ ಉಲ್ಲೇಖಿಸಿರುವ ಮಂಗಲಶ್ಲೋಕವನ್ನು ಆಧಾರವಾಗಿಸಿ ಸಮಂತ ಭದ್ರರು ಆಪ್ತಮೀಮಾಂಸಾ ರಚನೆ ಮಾಡಿರುವರು ಎಂಬ) ರೀತಿಯದಾದ ಯಾವುದೇ ಆದ ಸೂಚನೆಯನ್ನಾಗಲಿ ಮಾಡಿರುವುದಿಲ್ಲ. ಇವರು 'ಆಪ್ತಮಿಮಾಂಸಾ'ದ ಅರ್ಥವನ್ನು 'ಸರ್ವಜ್ಞ ವಿಶೇಷ ಪರೀಕ್ಷಾ' ಎಂದು ಹೇಳಿರುವ ಕಥನದ ಸಮರ್ಥನೆಯು ಯಾವ ಸ್ರೋತದಿಂದಾಗಲಿ ಆಗುವುದಿಲ್ಲ. ಹೀಗಿದ್ದರೂ ಆಚಾರ್ಯ ಸಮಂತಭದ್ರರ ಕಾಲ ನಿರ್ಣಯದ ಬಗ್ಗೆ ವಿಶೇಷ ಚಿಂತಿತರಾಗಿರುವ ವಿದ್ವಾಂಸರು ವಿದ್ಯಾನಂದರ ಈ ಉಕ್ತಿಯನ್ನು ಪ್ರಮಾಣೀಕವೆಂದು ಅಂಗೀಕರಿಸಿ ಅದರ ಜೊತೆಗೆ (ಉಕ್ತ ಮಂಗಲ ಶ್ಲೋಕವು ಆಚಾರ್ಯ ಪೂಜ್ಯಪಾದರ ಸರ್ವಾರ್ಥಸಿದ್ಧಿಯದು, ತತ್ತ್ವಾರ್ಥಸೂತ್ರದ ಎಂಬುದಾದ) ತಮ್ಮ ಅಭಿಮತವನ್ನು ಪ್ರಸುತಪಡಿಸಿ ಬರದೇ ಬಿಟ್ಟಿರುವರು. ಏನೆಂದರೆ–'ಏನೇ ಇರಲಿ, ಸ್ವಾಮಿ ಸಮಂತಭದ್ರರ ಬಗ್ಗೆ ಆಗಿರುವ ಅನೇಕ ಊಹಾಪೋಹಗಳ ಬಳಿಕ, ಅವರು ಪೂಜ್ಯಪಾದ ದೇವನಂದಿಯವರಿಂದ ಪೂರ್ವ(ಕಾಲ)ದವರಲ್ಲವೇ ಅಲ್ಲವೆಂದು ಈಗ ನನಗೆ ಅತಿಸ್ಪಷ್ಟವಾಗಿದೆ, ಪೂಜ್ಯಪಾದರಿಂದ ಸ್ತುತನಾಗಿರುವ 'ಆಪ್ತ'ನ ಸಮರ್ಥನೆಯಲ್ಲಿಯೇ ಅವರು ಆಪ್ತಮೀಮಾಂಸಾದ ರಚನೆಮಾಡಿದ್ದಾರೆಂಬ ಈ ಮಾತನ್ನು ಆಚಾರ್ಯ ವಿದ್ಯಾನಂದರು (ತಮ್ಮ) ಆಪ್ತಪರೀಕ್ಷಾ ಮತ್ತು ಅಷ್ಟ ಸಹಸ್ರಿಕೃತಿಗಳಲ್ಲಿ ಸ್ಪಷ್ಟವಗಿ ಬರೆದಿದ್ದಾರೆ (ನೋಡಿ : ಅಕಲಂಕ ಗ್ರಂಥತ್ರಯದ ಪ್ರಾಕ್ಕಥನ) ಇದು ಸಾಹಸಪೂರ್ಣಕಥನವಲ್ಲದೆ ಮತ್ತೇನಲ್ಲ, ಆಚಾರ್ಯ ವಿದ್ಯಾನಂದಿಯವರು ಪೂಜ್ಯಪದರ ಅಥವಾ ಅವರ ಸರ್ವಾರ್ಥಸಿದ್ಧಿಟೀಕೆಯ ಉಲ್ಲೇಖವನ್ನೂ ಕೂಡ ಮಾಡಿಲ್ಲ, ಆದರೆ ಆಪ್ತಪರೀಕ್ಷೆಯಲ್ಲಿ ಈ

ಹೇಳಿದ ಮಂಗಲಶ್ಲೋಕ (ತತ್ತ್ವಾರ್ಥ) ಸೂತ್ರಕಾರನದೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಇದಲ್ಲದೆ ಇದೇ ಆಚಾರ್ಯರು ಅಷ್ಟಸಹಸ್ರೀ ಪ್ರಾರಂಭದಲ್ಲಿ 'ನಿಶ್ರೇಯಸ ಶಾಸ್ತ್ರಸ್ಯಾದೌ . . .ಮಿನಿಭಿಃ ಸಂಸ್ತುತೇನ' ಎಂದು ಮುಂತಾಗಿ ಹೇಳಿ ಸ್ಪಷ್ಟ ರೀತಿಯಿಂದ 'ಮೋಕ್ಷ ಶಾಸ್ತ್ರ-ತತ್ತ್ವಾರ್ಥ ಸೂತ್ರ'ವನ್ನು ನಿರ್ದೇಶಿಸಿದ್ದಾರೆ. ದೂರದರ್ಶಿಯೂ, ಬಹುಶ್ರುತ ವಿದ್ವಾಂಸರೂ ಆದ ಸುಖಲಾಲಜಿಯವರು ಈರೀತಿಯಾಗಿ ಹೇಗೆ ತಾನೆ ಬರೆದರೆಂಬುದು ತಿಳಿಯದಾಗಿದೆ." ಮಾನ್ಯ ನ್ಯಾಯಾಚಾರ್ಯ ಪಂಡಿತ ದರ್ಬಾರೀಲಾಲ್ ಶಾಸ್ತ್ರೀಯವರ ಮೇಲ್ಕಂಡ ವಿವೇಚನಾಪೂರ್ಣ ವಿವರಣೆಯೂ, ಒಂದನೆಯದಾಗಿ, ಸ್ವಾಮಿಸಮಂತ ಭದ್ರರ ಆಪ್ತಮೀಮಾಂಸಾ ರಚನೆಗೆ ಹಿಂದೆ ಉಲ್ಲೇಖಿಸಿರುವ ಮಂಗಲಶ್ಲೋಕವು ಆಧಾರವಾಗಿಲ್ಲವೆಂದು ನಿರೂಪಿಸುತ್ತದೆ. ಎರಡನೆಯದಾಗಿ ಈ ಮಂಗಲಶ್ಲೋಕವು ಸರ್ವಥಾ ಪೂಜ್ಯಪಾದರ ಸರ್ವಾರ್ಥಸಿದ್ಧಿ ಟೀಕೆಯ ಅಂಗವಾದ ಮಂಗಲವಾಗಿಲ್ಲವೆಂದೂ ಸ್ಪಷ್ಟಪಡಿಸುತ್ತದೆ. ಈ ಎರಡನೆಯ ಅಂಶದ ಸಮರ್ಥಕವಾಗಿ ಮತ್ತೂಎರಡು ಅಂಶಗಳನ್ನು ಗಮನಿಸಬಹುದಾಗಿದೆ.

ದಕ್ಷಿಣಭಾರತದ ಜೈನರಲ್ಲಿ ತತ್ತ್ವಾರ್ಥ ಸೂತ್ರದ ಹತ್ತೂ ಅಧ್ಯಾಯಗಳನ್ನು ಕಂಠಪಾಠ ಮಾಡುವ ರೂಢಿಯಿದೆ. ಹತ್ತೂ ಅಧ್ಯಾಯ ಪೂರ್ಣವಾದ ತತ್ತ್ವಾರ್ಥ ಸೂತ್ರದ ಒಂದು ಬಾರಿಯ ಪಠಣದಿಂದ ಒಂದು ಉಪವಾಸದ ಫಲ ದೊರೆಯು ವುದೆಂಬ ಪರಂಪರಾಗತ ನಂಬಿಕೆಯಿದೆ. ಇದಲ್ಲದೆ ವಿಶೇಷರೀತಿಯಾದ ದೇವತಾ ರಾಧನೆಯ ಪ್ರಾರಂಭಿಕ ಮಂತ್ರಪಾಠದಲ್ಲಿ ತತ್ತ್ವಾರ್ಥಸೂತ್ರ ಪಠಣವು ಅಂಗವಾಗಿ ಸೇರಿದೆ. ಈ ಎಲ್ಲ ಸಂದರ್ಭಗಳಲ್ಲಿಯೂ ತತ್ತ್ವಾರ್ಥ ಸೂತ್ರಪಠಣವನ್ನು 'ಮೋಕ್ಷ ಮಾರ್ಗಸ್ಯನೇತಾರಂ . . .' ಎಂಬ ಪ್ರಸ್ತುತ ಮಂಗಲಶ್ಲೋಕದಿಂದಲೇ ಪ್ರಾರಂಭಿಸಲಾಗುವುದು. ಆದ್ದರಿಂದ ಈ ಮಂಗಲವನ್ನು ತತ್ತ್ವಾರ್ಥಸೂತ್ರದ ಪ್ರಾರಂಭಿಕ ಮಂಗಲವೆಂದೇ ಸರ್ವಸಾಧಾರಣವಾಗಿ ತಿಳಿಯಲಾಗಿದೆ. ಇಷ್ಟು ಮಾತ್ರವಲ್ಲ, ಜೈನ ಧರ್ಮದ ವಿಶೇಷಪರಿಣತಿ ಹೊಂದಿದ ವಿದ್ವಾಸಂರೂ ಕೂಡ ಈ ಮಂಗಲವನ್ನು ತತ್ತ್ವಾರ್ಥಸೂತ್ರದ್ದೆಂದೇ ಮಾನ್ಯಮಾಡಿದ್ದಾರೆ. ಈ ಮಾನ್ಯತೆ ಬಹು ಹಿಂದಿನಕಾಲದಿಂದಲೂ ಅನೂಚಾನವಾಗಿ ಬಂದದ್ದಾಗಿದೆ. ಉದಾಹರಣೆಯಾಗಿ : ಭಾಸ್ಕರ ನಂದಿಯವರು ತಮ್ಮ 'ಸುಖಬೋಧಾ' ತತ್ತ್ವಾರ್ಥವೃತ್ತಿಯಲ್ಲಿ 'ಅಲ್ಲಿ (ತತ್ತ್ವಾರ್ಥ ಸೂತ್ರದಲ್ಲಿ) ನಮಸ್ಕಾರ ಶ್ಲೋಕ' ಎಂದು ಹೇಳಿ ಇದೇ 'ಮೋಕ್ಷಮಾರ್ಗಸ್ಯ. . .'

ಶ್ಲೋಕವನ್ನು ಉಲ್ಲೇಖಿಸಿದ್ದಾರೆ. ಇದೇ ಅಭಿಪ್ರಾಯವನ್ನು ಇನ್ನೂ ಇತರ ಅನೇಕ ಆಚಾರ್ಯರು ವ್ಯಕ್ತಪಡಿಸಿದ್ದಾರೆ.[೨೨] ಈ ಬಗ್ಗೆ ಈ ಮುಂದಿನ ಸಂಗತಿಯನ್ನೂ ಗಮನಿಸಬೇಕಾಗಿದೆ.

'ಮೋಕ್ಷಮಾರ್ಗಸ್ಯ' ಮಂಗಲಶ್ಲೋಕವು 'ಸರ್ವಾರ್ಥಸೊದ್ಧಿ' ಗ್ರಂಥದ ಆರಂಭ ದಲ್ಲಿದೆ. ಆದ್ಧರಿಂದ ಇದು ಸರ್ವಾರ್ಥಸಿದ್ಧಿಯ ಮಂಗಲವಾಗಿದೆ, ಸೂತ್ರಕಾರರದ್ದಲ್ಲ ಎಂದು ನಿಟವೇ ಕುಲೋತ್ಪನ್ನ ಬ್ರಹ್ಮಸೂನು ಕಲಾಪಶರ್ಮರು (ಕಪಲ ಭರಮಪ್ಪಾನಿಟವೇ ಅವರು) ಹೇಳಿದ್ದಾರೆ.[೨೮] ಇವರು ಹೇಳಿರುವಂತೆ ಈ ಮಂಗಲಶ್ಲೋಕವು ಸರ್ವಾರ್ಥಸಿದ್ದಿ ಟೀಕೆಯ ಆರಂಭದಲ್ಲಿ ಇರುವಂತೆ ಸರ್ವಾರ್ಥಸಿದ್ಧಿ ಟೀಕೆಯಿಲ್ಲದಿರುವ ತತ್ತ್ವಾರ್ಥಸೂತ್ರ ಮಾತ್ರದ ಕೃತಿಗಳ ಆರಂಭದಲ್ಲಿಯೂ ಇದೆ. ಇದಲ್ಲದೆ ತತ್ತ್ವಾರ್ಥಸೂತ್ರದ ಸೂತ್ರಗಳನ್ನೊಳಗೊಂಡಿರದ ಸರ್ವಾರ್ಥಸಿದ್ಧಿ ಟೀಕೆಯ ಸ್ವತಂತ್ರ ಗ್ರಂಥವಂತೂ ಇಲ್ಲವೇ ಇಲ್ಲ. ಆದ್ದರಿಂದ ಈ ಮಂಗಲಶ್ಲೋಕವು ಸರ್ವಾರ್ಥಸಿದ್ಧಿ ಟೀಕೆಯದೇ ಆಗಿದೆಯೆಂದು ಹೇಳುವುದು ಸಮಂಜಸವಲ್ಲ. ಮತ್ತೊಂದು ಅಂಶವೆಂದರೆ ಈ ಮಂಗಲ ಶ್ಲೋಕವು ಸೂತ್ರಕಾರರದ್ದೇ ಆಗಿದ್ದ ಪಕ್ಷದಲ್ಲಿ ಪೂಜ್ಯಪಾದರು ಹಾಗೂ ಅಕಲಂಕರು ಇದಕ್ಕೆ ವ್ಯಾಖ್ಯಾನ ಮಾಡಬೇಕಗಿದ್ದಿತು ಎಂಬ ವದ ; ಅತ್ಯಂತ ಸರಳ ಹಾಗೂ ಸುಲಲಿತವಾಗಿರುವ ಈ ಶ್ಲೋಕಕ್ಕೆ ವ್ಯಾಖ್ಯಾನದ ಅಗ್ಯವಿಲ್ಲವೆಂದೇ ತಿಳಿಯಬೇಕಾಗಿದೆ. ಈ ಮಂಗಲಶ್ಲೋಕವು ತತ್ತ್ವಾರ್ಥಸೂತ್ರ ರಚನಕಾರರ ರಚನೆ ಯಾಗಿದೆ ಎಂದು ಹೇಳಿರುವ ವಿದ್ಯಾನಂದರೂ ಈ ಶ್ಲೋಕಕ್ಕೆ ವ್ಯಾಖ್ಯಾನ ಮಾಡಿಲ್ಲ ವೆಂಬುದು ಪ್ರಸ್ತುತ ಪ್ರಸಂಗದಲ್ಲಿ ಗಮನಾರ್ಹವಾಗಿದೆ.

ಸ್ವಾಮಿ ಸಮಂತಭದ್ರರ ಜೀವಿತಕಾಲ ನಿರ್ಣಯ ಮಾಡುವಲ್ಲಿ 'ಮೋಕ್ಷ ಮಾರ್ಗಸ್ಯ. . .' ಮಂಗಲ ಶ್ಲೋಕದ ಕರ್ತೃತ್ವ ಸಂಗತಿಯು ವಾದ ವಿವಾದಗಳಿಗೆಡೆ ಮಾಡಿರುವುದು ಸ್ಪಷ್ಟವಿದೆ. ಈಗ ಈ ನಿರ್ಣಯಕ್ಕಾಗಿ ಇತರ ಸಾಧಕಾಂಶಗಳ ಪರ್ಯಾ ಲೋಚನೆ ಮಾಡಬೇಕಾಗಿದೆ.

ದೇವನಂದಿ ಪೂಜ್ಯಪಾದ ಸ್ವಾಮಿಯವರು ಜೈನೇಂದ್ರ ವ್ಯಾಕರಣದ ರಚನಕಾರ ರಾಗಿರುವರೆಂಬುದು ಪ್ರಸಿದ್ಧ ಸಂಗತಿ[೨೯]. ಇದಲ್ಲದೆ ಇವರು ಜೈನೇಂದ್ರನ್ಯಾಸದ ರಚನಕಾರರಾಗಿರುವರೆಂಬ ಶಾಸನಗತ ಐತಿಹ್ಯವೂ ಇದೆ. ಈಗ ಉಪಲಬ್ಧವಿರುವಂತೆ ಜೈನೇಂದ್ರ ವ್ಯಾಕರನದಲ್ಲಿ 'ಚತುಷ್ಟಯಂ ಸಮಂತ ಭದ್ರಸ್ಯ (೫–೪–೧೪೦) ಎಂಬ ಸೂತ್ರದ ಮೂಲಕ ಈ

ಸೂತ್ರದ ಹಿಂದಿನವಾದ ನಾಲ್ಕು ಸೂತ್ರಗಳಲ್ಲಿ ಸಮಂತಭದ್ರರ ಮತದ ನಾಲ್ಕು ಪ್ರಕ್ರಿಯೆಗಳನ್ನು ಹೇಳಿದೆ. ಇದರಿಂದ ಪೂಜ್ಯಪಾದರಿಂದ ಜೈನೇಂದ್ರದ ರಚನೆಯಾಗುವ ಸಮಯಕ್ಕೆ ಸಮಂತಭದ್ರರ ವ್ಯಾಕರಣ ಸಂಬಂಧಿಯಾದ ಮತವು ವಿದ್ವಾಂಸರಲ್ಲಿ ಮಾನ್ಯತೆ ಪಡೆದಿದ್ದಿತೆಂಬುದರ ಬಗ್ಗೆ ವಿವಾದವಿಲ್ಲ. ಇದರಂತೆ ಜೈನೇಂದ್ರದ ರಚನೆಯಾಗುವ ಕಾಲಕ್ಕೆ ಸಮಂತಭದ್ರರು ಅನೇಕ ಆಧ್ಯಾತ್ಮಿಕ ಕೃತಿ ಗಳನ್ನು ರಚಿಸಿದ್ದು ಪ್ರೌಢವಿದ್ವಾಂಸರೆಂಬ ಮಾನ್ಯತೆ ಗಳಿಸಿದ್ದರೆಂದು ಸ್ವತಃಸಿದ್ಧವಾಗುವುದು. ದೇವನಂದಿ ಪೂಜ್ಯಪಾದರ ಕೃತಿಗಳಲ್ಲಿ ತತ್ತ್ವಾರ್ಥಸೂತ್ರದ ವ್ಯಾಖ್ಯಾನ ವಾದ ಸರ್ವಾರ್ಥಸಿದ್ಧಿಯು ಅತ್ಯಂತ ಪ್ರೌಢವೂ ಸಿದ್ಧಾಂತಸದೃಶವೂ ಆದುದಾಗಿ ಮಾನ್ಯತೆ ಹೊಂದಿದೆ. ಇದರಲ್ಲಿ ಷಟ್ ಖಂಡಾಗಮದ ಪ್ರಥಮಗ್ರಂಥದಲ್ಲಿ ಗುರುತಿ ಸಲಾಗಿರುವುದನ್ನು ಕಾಣಬಹುದು. ಪ್ರಾಯಶಃ ಈ ಸರ್ವಾರ್ಥಸಿದ್ಧಿಯ ರಚನೆ ಮಾಡುವುದಕ್ಕಿಂತ ಮುಂಚಿತವಾಗಿ ಇವರು ಸಿದ್ಧಾಂತದ 'ಸಾರಸಂಗ್ರಹ'ವನ್ನು ರಚಿಸಿದ್ದರೆಂದು ಹೇಳ ಬಹುದಾಗಿದೆ. ಸರ್ವಾರ್ಥಸಿದ್ಧಿಯಲ್ಲಿರುವ ಸಿದ್ಧಾಂತದ ಸಂಸ್ಕೃತ ಉಕ್ತಿಗಳನ್ನು ಇವರು ತಮ್ಮ ಸಾರಸಂಗ್ರಹದಿಂದಲೇ ಉದ್ಧೃತಗೊಳಿಸಿದ್ದಾರೆಂದಾದಲ್ಲಿ ಅದು ಅಸಂಭವವಲ್ಲ. ಈ ಸರ್ವಾರ್ಥಸಿದ್ಧಿಯ ರಚನೆ ಕಾಲಲ್ಲೆ ದೇವನಂದಿ ಪೂಜ್ಯ ಪಾದರು ಪ್ರೌಢ ವಿದ್ವಾಂಸರಾಗಿದ್ದರೆಂದು ಮತ್ತು ಈ ಕೃತಿಯೇ ಇವರ ಅಂತಿಮಕೃತಿ ಯಾಗಿರಬೇಕೆಂದು ತಿಳಿಯಬಹುದಾಗಿದೆ. ಈಕೃತಿಯಲ್ಲಿ ತತ್ತ್ವಾರ್ಥಸೂತ್ರದ ಸೂತ್ರಗಳ ಅರ್ಥ ವಿವರಣೆಯ ಅನೇಕ ಸಂದರ್ಭಗಳಲ್ಲಿ ಜೈನೇಂದ್ರ ವ್ಯಾಕರಣ ಅನೇಕ ಸೂತ್ರಗಳನ್ನು ಉಲ್ಲೇಖಿಸಲಾಗಿದೆ. ಆದ್ದರಿಂದ ಸರ್ವಾರ್ಥಸಿದ್ದಿಯ ರಚನೆಯ ಕಾಲಕ್ಕೆ ದೇವನಂದಿ ಪೂಜ್ಯಪಾದರ ಸಂಮುಖದಲ್ಲಿ ಜೈನೇಂದ್ರವಿದ್ದಿತೆಂಬುದು ನಿರ್ವಿವಾದ ಸಂಗತಿ. ಇದರಂತೆಯೇ ಈ ಜೈನೇಂದ್ರದಲ್ಲಿ ಹೆಸರಿಸಲಾಗಿರುವ ಸಮಂತಭದ್ರರು, ಈ ಕೃತಿಯು ದೇವನಂದಿ ಪೂಜ್ಯಪಾದರಿಂದ ರಚಿತವಾಗಿರುವ ಕಾಲಕ್ಕಾಗಲೇ ಪ್ರೌಢ ವಿದ್ವಾಂಸರೆಂಬ ಖ್ಯಾತಿ ಹೊಂದಿದರೆಂಬುದು ಒಪ್ಪಬೇಕಾದ ಸಂಗತಿಯಾಗಿದೆ. ಹೀಗೇಯೇ ಸರ್ವಾರ್ಥಸಿದ್ದಿಯಲ್ಲಿ ಸಮಂತಭದ್ರರ ರಚನೆಗಳಾದ ರತ್ನಕರಂಡ ಶ್ರಾವಕಾಚಾರ, ಯುಕ್ತ್ಯನುಶಾಸನಗಳ ಪ್ರತಿಚ್ಛಾಯೆಗಳನ್ನು ಗುರುತಿಸಿ ಮಾನ್ಯ ಪಂ. ಫೂಲ್‌ಚಂದ್ರ ಸಿದ್ದಾಂತಶಾಸ್ತ್ರಿಯವರು ಸ್ಪಷ್ಟಪಡಿಸಿದ್ದಾರೆ.[೮೦] ಇದರಿಂದ ಸರ್ವಾರ್ಥ ಸಿದ್ದಿ ರಚನೆಯ ಕಾಲಕ್ಕೆ ದೇವನಂದಿ ಪೂಜ್ಯಪಾದರ ಸಂಮುಖದಲ್ಲಿ ಸಮಂತಭದ್ರರ ಈ ಹೇಳಿದ

ಕೃತಿಗಳದ್ದುವೆಂಬುದು ನಿಶ್ಚಿತ. ಇದರಿಂದ ದೇವನಂದಿ ಪೂಜ್ಯಪಾದರ ಕಾಲಕ್ಕೆ ಸಮಂತಭದ್ರರ ಕೃತಿಗಳು ವಿದ್ವಜ್ಜನರ ಮಾನ್ಯತೆ ಪಡೆದು ಪ್ರಸಿದ್ದವಿದ್ದುವೆಂದು ಸೂಚಿತವಾಗುವುದಾದ್ದರಿಂದ ಸಮಂತಭದ್ರರು ದೇವನಂದಿಪೂಜ್ಯಪಾದರಿಂದ ಕನಿಷ್ಠ ಮಿತಿಯಿಂದ ಒಂದು ತಲೆಮಾರಿನಷ್ಟಾದರೂ ಹಿಂದಿನ ಕಾಲದವರಾಗಿದ್ದರೆಂದು ಪರಿಗಣನೆ ಮಾಡುವುದು ಅತ್ಯಂತ ಸಹಜವಾಗಿದೆ.

ದೇವನಂದಿ–ಪೂಜ್ಯಪಾದರ ಜೀವಿತಕಾಲವನ್ನು ವಿಕ್ರಮ ಶಕೆ ಐದನೇ ಶತಮಾನದ ಉತ್ತರಾರ್ಧ ಮತ್ತು ಆರನೇ ಶತಮಾನದ ಪೂರ್ವಾರ್ಧವೆಂದು ಮಾನ್ಯ ಪಂ. ಫೂಲ್‌ಚಂದ್ ಸಿದ್ಧಾಂತಶಾಸ್ತ್ರೀಯವರು ಹೇಳಿದ್ದಾರೆ. (ಸ.ಸಿ.ಪ್ರ.ಪು.೯೬) ಆದರೆ ಇವರು ವಿ. ಸಂ. ಆರನೇ ಶತಮಾನದ ಮಧ್ಯವರ್ತಿ ಸಮಯದಲ್ಲಿ ಜೀವಿಸಿದ್ದರೆಂದು ಹೇಳುವುದು ಹೆಚ್ಚು ಸೂಕ್ತವಿದೆ.

ಶ್ರುತಾವತಾರದ ಕರ್ತೃ ಇಂದ್ರನಂದಿಯವರು ಹೇಳಿರುವಂತೆ, ಸ್ವಾಮಿ ಸಮಂತ ಭದ್ರರು ತುಂಬುಲೂರಾಚಾರ್ಯರ ಅನಂತರದ ಸಮೀಪವರ್ತಿಕಾಲದಲ್ಲಿ ಸಿದ್ಧಾಂತಕ್ಕೆ ಟೀಕೆ ರಚನೆ ಮಾಡಿರುವರೆಂದು ಗಣನೆ ಮಾಡಬಹುದಾಗಿದೆ. ಇದಲ್ಲದೆ ಈ ಮೇಲೆ ಪರಿಶೀಲನೆ ಮಾಡಿರುವುದರ ಅನುಗುಣವಾಗಿ ಇವರು ದೇವನಂದಿ ಪೂಜ್ಯಪಾದರಿಂದ ನಿಕಟವರ್ತಿಯಾದ ಹಿಂದಿನ ಕಾಲದವರಾಗಿದ್ದಾರೆ. ಇದರಂತೆ ಸಮಂತಭದ್ರರು ವಿ. ಶಕೆ ಐದನೇ ಶತಮಾನದ ಮಧ್ಯವರ್ತಿ ಸಮಯದಲ್ಲಿ ಜೀವಿಸಿದ್ದರೆಂದು ಗಣನೆ ಮಾಡಬಹುದಾಗಿದೆ. ಶ್ವೇತಾಂಬರ ಪಂಥದ ಪಟ್ಟಾವಲಿಗಳಲ್ಲಿ ಸ್ವಾಮಿ ಸಮಂತ ಭದ್ರರನ್ನು ಸಾಮಂತಭದ್ರರೆಂದು ಹೆಸರಿಸಿ ಖರತರಗಚ್ಛಪಟ್ಟಾವಲಿಯಲ್ಲಿ ೧೯ನೇ ಪಟ್ಟಧರರನ್ನಾಗಿಯೂ ತಪಾಗಚ್ಛ ಪಟ್ಟಾವಲಿಯಲ್ಲಿ ೧೬ನೇ ಪಟ್ಟಧರರನ್ನಾಗಿಯೂ ಕಾಣಿಸಿದೆ. ಇದಲ್ಲದೆ ಇವೆರಡೂ ಪಟ್ಟಾವಲಿಗಳಲ್ಲಿ ಇವರಿಂದ ವನವಾಸಿಗಚ್ಛ ಪ್ರಾರಂಭವಾಯಿತೆಂದು ಹೇಳಿದೆ. ಗಚ್ಛಗಳಲ್ಲಿ ಕೆಲವು, ಸ್ಥಳಗಳ ಹೆಸರುನಾಧಾರದಿಂದ ನಾಮಕರಣ ಹೊಂದಿರುವ ಉದಾಹರಣೆಗಳಿವೆ. ಇದರಂತೆ ಸಮಂತಭದ್ರರಿಂದ ಈ ಹೇಳಿದ ಗಚ್ಛವು ಆರಂಭವಾಗಿದ್ದಲ್ಲಿ ಅದು ಕರ್ನಾಟದ ಪ್ರಸಿದ್ಧ ನಗರವಾಗಿದ್ದ ಬನವಾಸಿಯ ಹೆಸರಿನಾಧಾರದಿಂದ ನಾಮಕರಣ ಹೊಂದಿರಬೇಕೆಂದು ತಿಳಿಯಬಹುದಾಗಿದೆ.

ಸಮಂತಭದ್ರರ ಕೃತಿಗಳು : ಆಪ್ತಮೀಮಂಸಾ (ದೇವಾಗಮ) ಯುಕ್ತ್ಯನುಶಾಸನ, ಸ್ವಯಂಭೂಸ್ತೋತ್ರ, ಸ್ತುತಿವಿದ್ಯಾ (ಜಿನಶತಕ) ಇವು ಈಗ ಉಪಲಬ್ಧವಿರುವ ಕೃತಿ ಗಳು. ಇವಲ್ಲದೆ 'ಜೀವಸಿದ್ಧಿ' ಎಂಬ ಕೃತಿಯು ಇವರಿಂದ ರಚಿತವಾಗಿರಬೇಕೆಂದು ಪುನ್ನಾಟಜಿನಸೇನರ ಹರಿವಂಶಪುರಾಣದ ಪೂರ್ವಕವಿಪ್ರಶಸ್ತಿಯಿಂದ ಸೂಚಿತವಾಗುವುದು. ಪ್ರಸ್ತುತ ಪ್ರಸಂಗದಲ್ಲಿ ಈ ಆಚಾರ್ಯರ ಕೃತಿಗಳ ಬಗ್ಗೆ ಚಾವುಂಡರಾಯನು ಹೇಳಿರುವ ಮುಂದಿನ ಸಂಗತಿಯನ್ನು ಅವಶ್ಯವಾಗಿ ಗಮನಿಸಬೇಕಾಗಿದೆ.

ಅಭಿಮತ ಮಾಗಿರ ತತ್ತ್ವಾರ್ಥ ಭಾಷ್ಯಮಂ ತರ್ಕಶಾಸ್ತ್ರಮಂ ಬರೆದು ವಚೋ ।
ವಿಭವದಿನಿಳೆಗೆಸೆದ ಸಮಂತಭದ್ರದೇವರ ಸಮಾನರೆಂಬರು ಮೊಳರೇ ॥ ೫ ॥
ಅವಿಚಾರಿತರಮಣೀಯರ ಕವಿತೆಯದಿರ್ಕೀ ಸಮಂತಭದ್ರತ್ರಯಮಂ ।
ಕವಿಗಳ್ ರತ್ನತ್ರಯಮೆಂದೆವಲಂ ಕೋಂಡಾದಿದರ್ ಮಹೀಮಂಡಲದೊಳ್ ॥ ೬ ॥

ಮೊದಲನೆಯದಾಗಿ ಇಲ್ಲಿ, ಸಮತಭದ್ರರು ತತ್ತ್ವಾರ್ಥ ಭಾಷ್ಯ ಬರೆದಿರುವರೆಂದು ಹೇಳಿರುವುದು ಗಮನಾರ್ಹವಾಗಿದೆ. ಚಾವುಂಡರಾಯನಿಗಿಂತ ಪೂರ್ವಕಾಲೀನರಾದ ವರು ಯಾರಾಗಲಿ ಸಮಂತಭದ್ರರಿಂದ ರಚಿತವಾದ ತತ್ತ್ವಾರ್ಥಸೂತ್ರದ ಬಾಷ್ಯ (ವ್ಯಾಖ್ಯಾನ)ದ ಬಗ್ಗೆ ಯಾವುದೇ ರೀತಿಯಾದ ಉಲ್ಲೇಖ ಮಾಡಿರುವುದು ಕಂಡು ಬರುವುದಿಲ್ಲ. ದಿಗಂಬರ ಪಂಥದಲ್ಲಿ ಪೂಜ್ಯಪಾದರ ಸರ್ವಾರ್ಥಸಿದ್ಧಿಯೇ ಪ್ರಥಮ ವ್ಯಾಖ್ಯಾನವೆಂದು ಪರಿಗಣಿತವಾಗಿದೆ. ಆದ್ದರಿಂದ ಪೂಜ್ಯಪಾದರಿಂದ ಹಿಂದಿನ ಕಾಲ ದವರಾದ ಸಮಂತಭದ್ರರು 'ತತ್ತ್ವಾರ್ಥಭಾಷ್ಯ' ರಚನೆ ಮಾಡಿದ್ದಾರೆಂಬ ಚಾವುಂಡ ರಾಯನ ಹೇಳಿಕೆಯು ತತ್ತ್ವಾರ್ಥಸೂತ್ರದ ಭಾಷ್ಯ ಎಂಬುದರ ಸೂಚಕವಾಗಿರದೆ ಷಟ್‌ಖಂಡಾಗಮ ಸಿದ್ಧಾಂತದ ಭಾಷ್ಯ ಅಥವಾ ಟೀಕೆ ಎಂದು ಗ್ರಹಿಸಬೇಕಾಗುವುದು. ಹಿಂದೆ ಹೇಳಿರುವಂತೆ ಮಾನ್ಯ ಹೀರಾಲಾಲ್ ಜೈನ್ ರವರು 'ತತ್ತ್ವಾರ್ಥ ಮಹಾಶಾಸ್ತ್ರ' ಎಂಬು ದಕ್ಕೆ ಇದೇ ಅರ್ಥವನ್ನು ಹೇಳಿದ್ದಾರೆಂಬುದು ಪ್ರಕೃತಸಂದರ್ಭದಲ್ಲಿ ಅವಧಾಣಾರ್ಹವಾ ಗಿದೆ. ಹೀಗೆಯೇ ಪ್ರಸಿದ್ಧ ಗೊಮ್ಮಟಸಾರ ರಚನಕಾರ ನೇಮಿಚಂದ್ರ ಚಕ್ರವರ್ತಿಯವರು 'ಗೊಮ್ಮಟ ಸಂಗಹ ಸುತ್ತಂ'ವನ್ನು 'ತಚ್ಚಟ್ಠವಧಾರಣಟ್ಠಂ' (ತತ್ತ್ವಾರ್ಥಾವಧಾರಣಾರ್ಥಂ) ಎಂದು ಹೇಳಿರುವುದೂ ಪ್ರಸ್ತುತ ಪ್ರಸಂಗದಲ್ಲಿ

ಅವಶ್ಯಗಮನಾರ್ಹವಾಗಿದೆ. ಇದರಂತೆ, ಸಮಂತಭದ್ರರಿಂದ ರಚಿತವಾಗಿದ್ದ ಷಟ್ಖಂಡಾಗಮ ಸಿದ್ಧಾಂತದವ್ಯಾಖ್ಯಾನವನ್ನು 'ತತ್ತ್ವಾರ್ಥಭಾಷ್ಯ' ಎಂದು ಹೆಸರಿಸಿದ್ದಲ್ಲಿ ಅದು ಅಸಂಭಾವ್ಯವೆನಿಸುವುದಿಲ್ಲ. ಮೇಲೆ ಹೇಳಲಾಗಿರುವ 'ತರ್ಕಶಾಸ್ತ್ರಮಂ' ಎಂಬುದು ಇವರ 'ಆಪ್ತಮೀಮಾಂಸಾ ಮತ್ತು ಯುಕ್ತ್ಯನುಶಾಸನಗಳ ಸೂಚಕವನ್ನಾಗಿ ತಿಳಿಯಬಹುದು. ಇನ್ನು 'ಸಮಂತ ಭದ್ರತ್ರಯಮಂ' ಎಂಬುದು ಸಂದರ್ಭಾನುಸಾರವಾಗಿ ಕಾವ್ಯತ್ರಯದ ಸೂಚಕವಾಗಿರುವಂತೆ ಕಂಡುಬರುತ್ತದೆ. ಈ ಆಚಾರ್ಯರ ಎರಡು ಸ್ತೋತ್ರಕಾವ್ಯಗಳು–ಸ್ವಯಂಭೂಸ್ತೋತ್ರ ಮತ್ತು ಸ್ತುತಿವಿದ್ಯಾ–(ಜಿನಶತಕ)ಗಳು ಪ್ರಸಿದ್ಧವಿದೆ. ಆದರೆ ಮೂರನೆಯದಾದ ಕಾವ್ಯ ಯಾವುದು ಎಂಬ ಪ್ರಶ್ನೆ ಉಳಿಯುತ್ತದೆ. ಇದಕ್ಕೆ ಉತ್ತರ ವಾಗಿ ಹರಿವಂಶ ಪುರಾಣಕರ್ತೃಅರ್ ಪುನ್ನಾಟ ಜಿನಸೇನರು ಸೂಚಿಸಿರುವ 'ಜೀವಸಿದ್ಧಿ' ಆಗಿರಬಹುದೆ ? ಎಂಬ ವಿಚಾರಕ್ಕೆ ಎಡೆ ಇದೆ. ಮುದ್ರಾರಾಕ್ಷಸ ನಾಟಕದ ಒಂದು ಜೈನ ಸನ್ಯಾಸಿಯ ಪಾತ್ರದ ಹೆಸರು 'ಜೀವಸಿದ್ಧಿ' ಎಂದಿದೆಯಾಗಿ ಆದು ಸಮಂತಭದ್ರರ ಈ ಕಾವ್ಯದ ಮೂಲದ್ದಾಗಿರಬಹುದೆ ಎಂಬುದು ಆಲೋಚನಾರ್ಹವಾಗಿದೆ. ಸಮಂತ ಭದ್ರರು ಸಮಸ್ತ ಅಷ್ಟಾಂಗ ನಿರೂಪಣೆಯ ವೈದ್ಯ ಗ್ರಂಥವನ್ನು ರಚನೆಮಾಡಿದ್ದರೆಂಬ ಹೇಳಿಕೆಯೂ ಇದೆ. ಇದೂ ಅಲ್ಲದೆ ಹದಿನೆಂಟು ಸಹಸ್ರ ಗ್ರಂಥ ಪ್ರಮಾಣದ 'ಸಿದ್ಧಾಂತ ರಸಾಯನ ಕಲ್ಪ' ಎಂಬ ಕೃತಿಯನ್ನು ರಚಿಸಿದ್ದರೆಂಬ ಹೇಳಿಕೆ ಇದೆ.[೬೨] ಜೈನೇಂದ್ರ ವ್ಯಾಕರಣದಲ್ಲಿ ಇವರ ಅಭಿಪ್ರಾಯವನ್ನು ವ್ಯಕ್ತಪಡಿಸುವ ನಾಲ್ಕು ಸೂತ್ರಗಳವೆಯಾದ್ದರಿಂದ ಇವರು ಸಂಸ್ಕೃತವ್ಯಾಕರಣ ಒಂದನ್ನು ರಚನೆ ಮಾಡಿದ್ದಿರಬೇಕೆಂದು ಸೂಚಿತವಾಗುವುದು. ಇದಲ್ಲದೆ ಇವರಿಂದ ಪ್ರಾಕೃತವ್ಯಾಕರಣದ ರಚನೆಯಾಗಿದ್ದಿತೆಂಬ ಅನುಶ್ರುತಿಯೂ ಇದೆ.

ಸಮಂತಭದ್ರಸ್ವಾಮಿಯವರಿಂದ ಷಟ್ ಖಂಡಾಗಮಕ್ಕೆ ವ್ಯಾಖ್ಯಾನ ರಚಿತವಾಯಿ ತೆಂಬ ಶ್ರುತಾವತಾರದ ಹೇಳಿಕೆಯನ್ನು ಕ. ಪಾಹುಡದ ಪ್ರಸ್ತಾವನಾಕಾರರು ಪ್ರಶ್ನಿಸಿ ಅದರ ಅಸಂಭಾವ್ಯತೆಯ ಅಭಿಪ್ರಾಯ ವ್ಯಕ್ತ ಪಡಿಸಿರುವುದನ್ನು ಹಿಂದೆ ಉಲ್ಲೇಖಿಸಿದೆ. ಇವರ ಈ ಅಭಿಪ್ರಾಯಕ್ಕೆ ಸಮಂತಭದ್ರರನ್ನು ವಿ. ಶಕೆ. ಏಳನೇ ಶತಮಾನದ ಅನಂತರದ ಕಾಲದವರೆಂದು ಪರಿಗಣನೆ ಮಾಡಬೇಕಾಗಿಬಂದುದು ಮೂಲ ಕಾರಣವಾಗಿದೆ. ಆದರೆ ಈ ಹಿಂದೆ ನಿರೂಪಿಸಿರುವಂತೆ ಸಮಂತಭದ್ರರ ಜೀವಿತಕಾಲವು ವಿ. ಶಕೆ ಐದನೇ ಶತಮಾನವೆಂದು

ಪ್ರಮಾಣೀಕೃತವಾಗಿರುವುದ್ದಾರಿಂದ ಇವರಿಂದ ವ್ಯಾಖ್ಯಾನ ರಚನೆಯಾಗಿದೆ ಎಂಬ ಶ್ರುತಾವತರಾದ ಹೇಳಿಕೆ ಭಾಧಿತವಾಗದೆ ಸ್ಥಿರಪಡುವುದು. ಕ. ಪಾಹುಡ ಸಂಪಾದಕರು ಈ ವ್ಯಾಖ್ಯಾನದ ಬಗ್ಗೆ ವ್ಯಕ್ತಪಡಿಸಿರುವ ಮತ್ತೂ ಎರಡು ಪ್ರತಿರೀಧಕ ಅಂಶಗಳನ್ನು ಪರಿಶೀಲಿಸಬೇಕಾಗಿದೆ. ಯಾವುದೇ ಸಿದ್ಧಾಂತ ಗ್ರಂಥದ ಮೇಲಾಗಲಿ ಸಮಂತಭದ್ರರ ಯಾವ ವೃತ್ತಿಯೂ ಲಬ್ಧವಿಲ್ಲ, ಹಾಗೂ ಬೇರೆ ಯಾವುದೇ ಆಧಾರದಿಂದ ಅದರ ಸಮರ್ಥನೆಯಾಗುವುದಿಲ್ಲ ಎಂಬುದು ಇವರ ವಾದ. ಸಮಂತಭದ್ರರು ಷಟ್ಖಂಡಾಗಮದ ಮೊದಲ ಐದು ಖಂಡಗಳಿಗೆ ವ್ಯಾಖ್ಯಾನ ಮಾಡಿರುವರೆಂಬುದು ಶ್ರುತಾವತಾರದ ಹೇಳಿಕೆ. ಹೀಗಿರುವಲ್ಲಿ 'ಯಾವುದೇ ಸಿದ್ಧಾಂತ ಗ್ರಂಥದ ವೃತ್ತಿ' ಎಂದು ಹೇಳುವುದರ ಅರ್ಥ ಸಾಮಂಜಸ್ಯವೇನು ? ಹೀಗೆಯೇ ಅವರು ಬರೆದಿರುವ ಷಟ್ಖಂಡಾಗಮದ ವ್ಯಾಖ್ಯಾನ ಈ ದಿನ ದೊರೆಯುತ್ತಿಲ್ಲವೆಂಬಷ್ಟಕ್ಕಾ ಗಿಯೇ ಅವರು ಅದನ್ನು ರಚಿಸಿಯೇ ಇಲ್ಲ ಎಂದು ಹೇಳುವುದು ಯುಕ್ತಿಯುಕ್ತವೆ ? ಹಾಗೆ ಹೇಳುವುದಾದರೆ ಶ್ಯಾಮಕುಂಡರ ಮತ್ತು ತುಂಬುಲೂರಾಚಾರ್ಯರ ವ್ಯಾಖ್ಯಾನ ಗಳು ದೊರೆಯುತ್ತಿಲ್ಲ. ಆದರೂ ಈ ವ್ಯಾಖ್ಯಾನಗಳ ರಚನೆಯ ಸಂಭಾವ್ಯತೆಯನ್ನು ಕ. ಪಾಹುಡ ಸಂಪಾದಕ ಮಾನ್ಯರು ಒಪ್ಪಿದ್ದಾರೆ. ಈ ವ್ಯಾಖ್ಯಾನಗಳ ರಚನೆಯಾಗಿದ್ದುದಕ್ಕೆ ಬೇರೆಡೆಯಿಂದ ಯಾವುದಾದರೂ ಸಮರ್ಥನೇ ಇದೆಯೇ? ಇವುಗಳನ್ನು ಒಪ್ಪಿದಂತೆ ಅದೇ ಶ್ರುತಾವತಾರದ ಹೇಳಿಕೆಯ ಆಧಾರದಿಂದ ಒಪ್ಪಬಾರದೇಕೆ ? ಧವಲಾಟೀಕಾ ರಚನಕಾರರಾದ ವೀರಸೇನಾಚಾರ್ಯರು ತಮ್ಮ ಟೀಕೆಯಲ್ಲಿ ಶ್ಯಾಮ ಕುಂಡರನ್ನಾಗಲಿ ತುಂಬಲೂರಾಚಾರ್ಯರನ್ನಾಗಲಿ ಹೆಸರಿಸಿ, ಉಲ್ಲೇಖ ಮಾಡಿಲ್ಲ. ಪ್ರಾಯಶಃ ಅವರು ತಮ್ಮಗುರು ಏಲಾಚಾರ್ಯರ ಉಪದೇಶದಿಂದ ಪಡೆದ ವಸ್ತುವಿನ ಆಧಾರ ಮತ್ತು ಒಪ್ಪದೇವ ಗುರುವಿನ ವ್ಯಾಖ್ಯಾನ ಗ್ರಂಥಗಳಾಧಾರದಿಂದ ಟೀಕೆ ರಚನೆ ಮಾಡಿದ್ದಾರೆ. ಅವರಸಂಮುಖದಲ್ಲಿ ಶ್ಯಾಮಕುಂಡರ, ತುಂಬುಲೂಚಾರ್ಯರ ಸಂಮತಭದ್ರರ ವ್ಯಾಖ್ಯಾನಗಳಿರಲಿಲ್ಲಿ. ಆದರೆ ಪೂರ್ವಾಚಾಯರ ಅಥವಾ ಚಿರಂತನ ಆಚಾರ್ಯರ ಉಪದೇಶದಲ್ಲಿ ಆ ವ್ಯಾಖ್ಯಾನಗಳು ಅಂಶಿಕವಾಗಿ ದೊರಕಿದ್ದುವೆಂದು ತಿಳಿಯಬೇಕಾಗುತ್ತದೆ. ಈ ಚಿರಂತನಾಚಾರ್ಯರ ಉಪದೇಶದ ಉಲ್ಲೇಖಗಳಲ್ಲಿ ಅನೇಕ ಸಂಸ್ಕೃತ ಶ್ಲೋಕಗಳೂ ಇವೆ. ಸಮಂತಭದ್ರಸ್ವಾಮಿಯವರ ವ್ಯಾಖ್ಯಾನ ಸಂಸ್ಕೃತಭಾಷಾ ಮಾತ್ರದ್ದಾಗಿತು. ಆದ್ದರಿಂದ, ಪೂರ್ವಾಚಾರ್ಯರ ಉಪದೇಶ ರೂಪದಲ್ಲಿ

ಉಲ್ಲೇಖಗೊಂಡಿರುವ ಶ್ಲೋಕಗಳಲ್ಲಿ ಸಮಂತಭದ್ರರ ವ್ಯಾಖ್ಯಾನದ ಶ್ಲೋಕಗಳು ಸೇರಿರಬಹುದಾದ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಇವರ ಈ ವ್ಯಾಖ್ಯಾನದ ಬಗ್ಗೆ ಬೇರೆಡೆಯ ಸಮರ್ಥನೆ ದೊರೆಯುವುದಿಲ್ಲವೆಂದೇನಿಲ್ಲ. ಪೂಜ್ಯಪಾದಚರಿತೆಯ 'ಶ್ರುತಾವತಾರ' ಪ್ರಕರಣವು ಇಂದ್ರನಂದಿಯವರ ಶ್ರುತಾವತಾರದಿಂದ ಭಿನ್ನಮೂಲದ್ದಾಗಿದೆಯೆಂದು ಹಿಂದೆ ವಿವರಿಸಿದೆ. ಈಪೂಜ್ಯಪಾದಚರಿತೆಯ 'ಶ್ರುತಾವತಾರ' ಪ್ರಕರಣದಲ್ಲಿಯೂ ಸಮಂತಭದ್ರರ ವ್ಯಾಖ್ಯಾನದ ಬಗ್ಗೆ ಹೇಳಿದೆಯಾದ್ದರಿಂದ ಇದು ಇಂದ್ರನಂದಿಯವರ ಶ್ರುತಾವತಾರದ ಹೇಳಿಕೆಗೆ ಸಮರ್ಥಕವನ್ನಾಗಿ ಗಣನೆ ಮಾಡಬಹುದು. ಇದಲ್ಲದೆ ಈ ಹಿಂದೆ ವಿವರಿಸಿರುವಂತೆ ಚಾಮುಂಡರಾಯ ಪುರಾಣದಲ್ಲಿ ಹೆಸರಿಸಿರುವ 'ತತ್ವಾರ್ಥ ಭಾಷ್ಯ'ವು ಈ ಸಿದ್ಧಾಂತದ ವ್ಯಾಖ್ಯಾನವಾಗಿದೆ ಎಂದು ಪರಿಗಣನೆ ಮಾಡಬಹುದಾಗಿದೆ.

ದೇವನಂದಿ ಪೂಜ್ಯಪಾದರ ವ್ಯಾಖ್ಯಾನ : ಶ್ರುತಾವತಾರದಲ್ಲಿ ದೇವನಂದಿ ಪೂಜ್ಯ ಪಾದರ ವ್ಯಾಖ್ಯಾನದ ಬಗ್ಗೆ ಏನನ್ನಾಗಲಿ ಹೇಳಿಲ್ಲವಾದರೂ ಪೂಜ್ಯಪಾದಚರಿತೆಯಲ್ಲಿ ರವಿನಂದಿ ಮುನಿಪನ (ಬಪ್ಪದೇವಗುರುವಿನ) ಅನಂತರ "ಪಂಚಬಾಣನಗೆಲ್ದ ಪೂಜ್ಯ ಪಾದೇಂದ್ರನು ಸಂಚಿತವೆನೆ ಪೇಳ್ದ ಶ್ರುತವಾದ" (ಶ್ಲೋ. ೧೭೫) ಎಂದು ಹೇಳಿದೆ. ಪೂಜ್ಯಪಾದಚರಿತೆಯಲ್ಲಿ ಶ್ರುತಪ್ರವರ್ತನೆ ಮತ್ತು ಶ್ರುತದ ವ್ಯಾಖ್ಯಾನಕಾರರ ಇತಿ ವೃತ್ತವನ್ನು ನಿರೂಪಿಸುವ 'ಶ್ರುತಾವತಾರದ ಸಂಧಿ' ಎಂಬ ಹೆಸರಿನ ಒಂದು ಅಧ್ಯಾಯವೇ ಇದೆ. ಇದರಿಂದ ಪೂಜ್ಯಪಾದರನ್ನು ಶ್ರುತದ ವ್ಯಾಖ್ಯಾನಕಾರರಲ್ಲೊಬ್ಬರನ್ನಾಗಿ ಪರಿಗಣನೆ ಮಾಡಲಾಗಿದ್ದ, ಇಂದ್ರನಂದಿಯವರ 'ಶ್ರುತಾವತಾರ'ದಿಂದ ಭಿನ್ನವಾದ 'ಶ್ರುತಾವತಾರ'ವೊಂದು ಇದ್ದಿರಬೇಕೆಂದು ಮತ್ತು ಅದರ ಆಧಾರದಿಂದ 'ಪೂಜ್ಯಪಾದ ಚರಿತೆ' ರಚನಕಾರನು ಇತಿವೃತ್ತವನ್ನು ಹೇಳಿರುವನೆಂದು ತಿಳಿಯಬೇಕಾಗುವುದು. ಮೇಲೆ ಉಲ್ಲೇಖಿಸಿರುವ 'ಸಂಚಿತವೆನೆ ಪೇಳ್ದ' ಎಂಬುದಕ್ಕೆ 'ಸಂಗ್ರಹ ರೀತಿಯಿಂದ ಹೇಳಿದನು' ಎಂದರ್ಥ. ಧವಲಾದಲ್ಲಿ ಸಾರಸಂಗ್ರಹೇಪ್ಯುಕ್ತಂ ಪೂಜ್ಯಪಾದ್ಯೈಃ' ಎಂದು ಉಲ್ಲೇಖಿಸಿದೆಯೆಂದು ಮಾನ್ಯ ಹೀರಾಲಾಲಜೈನ್ ಅವರು ಹೇಳಿದ್ದಾರೆ.[೮೭]

ಪೂಜ್ಯಪಾದಚರಿತೆಯ ಈ ಮೇಲೆ ಉಲ್ಲೇಖಿಸಿರುವ ಉಕ್ತಿಯು ಈ ಸಾರ ಸಂಗ್ರಹದ ಸೂಚಕವಾಗಿದೆಯೆಂದು ನಿಶ್ಚಿತವಾಗುವುದು.

ಪೂಜ್ಯಪಾದರ ಕಾಲದ ಬಗ್ಗೆ ಹಿಂದೆ ಸೂಚ್ಯರೀತಿಯಿಂದ ಹೇಳಲಾಗಿದೆ. ಉಪಲಬ್ಧ ವಿರುವ ಎಲ್ಲ ಆಧಾರಗಳಿಂದ ಸೂಚಿತವಾಗುವಂತೆ ಪೂಜ್ಯಪಾದರು ಸ್ವಾಮಿ ಸಮಂತ  ಭದ್ರ ಅನಂತರದ ಅತಿ ನಿಕಟವರ್ತಿ ಸಮಯದಲ್ಲಿ, ಹೆಚ್ಚೆಂದ ಹೆಚ್ಚೆಂದರೆ ಒಂದು ತಲೆಮಾರಿನಷ್ಟು ಅನಂತರಕಾಲದಲ್ಲಿ ಜೀವಿಸಿದ್ದರೆಂದು ಹೇಳಬಹುದು. ಆದರೆ ಇವರನ್ನು ಪೂಜ್ಯಪಾದ ಚರಿತಕಾರರು ರವಿನಂದಿಯವರ ಹಾಗೂ ಬಪ್ಪದೇವಗುರುವಿನ ಅನಂತರದಲ್ಲಿ ಹೇಸರಿಸಿರುವುದು ಸಮಸ್ಯೆಯಾಗಿ ಕಾಣಬಹುದು ನಿಜ. ಆದರೆ ಪೂಜ್ಯ ಪಾದಚರಿತೆಯಲ್ಲಿ ಶ್ರುತಾವತಾರ ಪ್ರಕರಣದಲ್ಲಿ ಕಂಡುಬರುವ ನಾಲ್ಕೈದು ಲೋಪ ದೋಷಗಳಲ್ಲಿ ಇದೂ ಒಂದಾಗಿದೆ ಎಂದು ಗಣನೆ ಮಾಡಬೇಕಾಗಿದೆ.

ದೇವನಂದಿ ಪೂಜ್ಯಪಾದರ ಕನಿಷ್ಠ ಕಾಲಮಿತಿಗೆ ಅಕಲಂಕರ ಜೀವಿತಕಾಲವು  ಸ್ಪಷ್ಟವೂ ನಿಶ್ಚಿತವೂ ಆದ ಆಧಾರವಾಗಿದೆ. ಅಕಲಂಕರ (ತತ್ತ್ವಾರ್ಥ) ರಾಜವಾರ್ತಿಕವು ತತ್ತ್ವಾರ್ಥಸೂತ್ರಮಾತ್ರದ ವ್ಯಾಖ್ಯಾನವಾಗಿರದೆ ಪೂಜ್ಯಪಾದ ಸ್ವಾಮಿಯವರ ಸರ್ವಾರ್ಥಸಿದ್ಧಿಯ ಅರ್ಥೋದ್ಯೋತಕವೂ ಆಗಿದೆ ; ಸರ್ವಾರ್ಥಸಿದ್ಧಿಯ ಹೇಳಿಕೆಗಳ ಉಲ್ಲೇಖಗಳಿವೆ. ಆದ್ದರಿಂದ ಪೂಜ್ಯಪಾದರನ್ನು ಅಕಲಂಕರಿಂದ ಕನಿಷ್ಠ ಮಿತಿಯಿಂದ ಒಂದು ತಲೆಮಾರಿನಷ್ಟಾದರೂ ಹಿಂದಿನ ಕಾಲದವರೆಂದು ತಿಳಿಯಬಹುದಾಗಿದೆ. ಅಕಲಂಕರು ವಿ. ಸಂ. ೭೦೦ರಲ್ಲಿ ಬೌದ್ಧರೊಡನೆ ವಾದ ನಡೆಸಿದರೆಂಬ ಪರಂಪರಾಗತ ಹೇಳಿಕೆ ಇದೆ.[೮೮]

ಹೀಗೆಯೇ ಹಿಂದೆ ಹೇಳಿರುವಂತೆ ಸ್ವಾಮಿ ಸಮಂತಭದ್ರರ ಕಾಲದ ಅನಂತರದ ಸನ್ನಿಕೃಷ್ಟಕಾಲವನ್ನು ಇವರ ಕಾಲದ ಗರಿಷ್ಟ ಮಿತಿಯನ್ನಾಗಿ ಗಣನೆ ಮಾಡಬಹುದು.ಇವರ ಕಾಲವನ್ನು ಮತ್ತೂ ಹೆಚ್ಚಿನವಾದ ಖಚಿತರೀತಿಯಿಂದ ತೋರುವ ಆಧಾರವಿದೆ.ಇವರ ಶಿಷ್ಯರಾದ ವಜ್ರನಂದಿಯವರು ದ್ರಾವಿಡ ಸಂಘವನ್ನು ವಿಕ್ರಮನ ಮರಣ ಕಾಲದಿಂದ ೫೨೬ನೇ ವರ್ಷದಲ್ಲಿ ಸ್ಥಾಪಿಸಿದರೆಂದು ದೇವಸೇನರು (ವಿ. ಸಂ. ೯೯೦) ಹೇಳಿದ್ದಾರೆ.[೮೯] ಈ ಆಧಾರಗಳಿಂದ ದೇವನಂದಿ ಪೂಜ್ಯಪಾದರ ಕಾಲವನ್ನು ವಿಕ್ರಮ ಶಕೆ ಆರನೇ ಶತಮಾನದ ಅಂತರ್ಗತ ಕಾಲವೆಂದು ಗಣನೆ ಮಾಡುವುದು ಸೂಕ್ತವೆನಿಸುವುದು.

ದೇವನಂದಿ ಪೂಜ್ಯಪಾದರು ದಿಗಂಬರ ಜೈನಪಂಥದ ಹೆಸರಾಂತ ಆಚಾರ್ಯರಲ್ಲಿ ಅಗ್ರಪಂಕ್ತಿಗೆ ಸೇರಿದವರಾಗಿದ್ದಾರೆ. ಇದರ ಕಾರಣ ಅವರಿಂದ ರಚಿತವಾಗಿರುವ ಕೃತಿಗಳು : ತತ್ತ್ವಾರ್ಥಸೂತ್ರದ ಅತ್ಯಂತ ಪ್ರಾಚೀನ ವ್ಯಾಖ್ಯಾನವೆಂದು ಪರಿಗಣಿತ ವಾಗಿರುವ ಸರ್ವಾರ್ಥಸಿದ್ಧಿಯ ಅಪಾರ ಮನ್ನಣೆಗಳಿಸಿದುದಾಗಿದೆ. ಇದಲ್ಲದೆ ಸಮಾಧಿ ಶತಕ (ಸಮಾಧಿ ತಂತ್ರ), ಇಷ್ಟೋಪದೇಶ ಮತ್ತು 'ದಶಭಕ್ತಿ'ಯಲ್ಲಿ (ಕ್ರಿಯಾಕಲಾಪ ದಲ್ಲಿ) ಸಂಕಲಿತವಾಗಿರುವ ಸಂಸ್ಕೃತ ಭಕ್ತಿ ಪಾಠಗಳು ಉಪಲಬ್ಧವಿರುವ ಇವರ ಇತರ ಕೃತಿಗಳು, ಜೈನೇಂದ್ರ ವ್ಯಾಕರಣ, ಜೈನೇಂದ್ರ ನ್ಯಾಸ ಮತ್ತು ಶಬ್ದಾವತಾರಗಳು ಇವರ ರಚನೆಗಳೆಂದು ಮಾನ್ಯ ಮಾಡಲಾಗಿದೆ. ಇವುಗಳಲ್ಲಿ ಜೈನೇಂದ್ರ ವ್ಯಾಕರಣ ಮಾತ್ರ ಈಗ ಉಪಲಬ್ಧವಿದೆ. ಇವರು ವೈದ್ಯಶಾಸ್ತ್ರ ಗ್ರಂಥರಚನಕಾರರೆನಿಸಿ ಹೆಚ್ಚಿನದಾದ ಮಾನ್ಯತೆ ಪಡೆದಿದ್ದಾರೆ. ಜೈನಧರ್ಮೀಯರಿಂದ ರಚಿತವಾದ ವೈದ್ಯಗ್ರಂಥಗಳಲ್ಲಿ ಮಾತ್ರವಲ್ಲದೆ ಜೈನೇತರರಿಂದ ರಚಿತವಾಗಿರುವ ವೈದ್ಯಗ್ರಂಥಗಳಲ್ಲಿಯೂ ವೈದ್ಯ ಸಂಬಂಧಿಯಾದ ಇವರ ಅಭಿಮತಗಳನ್ನು ಗೌರವಪೂರ್ವಕ ಉಲ್ಲೇಖಿಸಲಾಗಿದೆ.[೯೦] ಇವರಿಂದ ಜೈನಾಭಿಷೇಕ, ಛಂದಸ್ಸು ಮತ್ತು ಜ್ಯೋತಿಶಾಸ್ತ್ರ ಗ್ರಂಥಗಳ ರಚನೆಯೂ ಆಗಿರಬೇಕೆಂಬ ಸೂಚನೆಗಳು ದೊರೆಯುತ್ತವೆ.[೯೧]

ಬಪ್ಪದೇವಗುರುವ್ಯಾಖ್ಯಾನವಿನಃ–ಇದುವರೆಗೆ ಹೇಳಿದ ಪ್ರಕಾರ ಪರಮಗುರು ಪರಂಪರೆಯಲ್ಲಿ ರಚಿತವಾದ ವ್ಯಾಖ್ಯಾನಗಳನ್ನು ಹೊಂದುತ್ತಾ ಬಂದ ಎರಡೂ ವಿಧದ ಸಿದ್ಧಾಂತವನ್ನು ನಿಶಿತಮತಿಗಳಾದ ಶುಭನಂದಿ ಮತ್ತು ರವಿನಂದಿ ಮುನಿಗಳು ಪಡೆದರು. ಅವರಿಂದ ಭೀಮರಥಿ ಮತ್ತು ಕೃಷ್ಣವೇಣ ನದಿಗಳ ಮಧ್ಯದ ರಮಣೀಯವಾದ ಉತ್ಕಲಿಕಾಗ್ರಾಮದ ಬಳಿ ವಿಖ್ಯಾತವಾದಮಗುಣಾವಲ್ಲೀ (ಮಣುವಕವಲ್ಲೀ) ಗ್ರಾಮ ದಲ್ಲಿ ಬಪ್ಪದೇವಗುರು ಅತ್ಯಾಸಕ್ತಿಯಿಂದ ಉಪದೇಶ ಪಡೆದು ಸಮಸ್ತ ಸಿದ್ಧಾಂತವನ್ನು ಅಧ್ಯಯನ ಮಾಡಿದನು. ಅನಂತರ ಷಟ್ ಖಂಡದಿಂದ ಮಹಾಬಂಧವನ್ನುತೆಗೆದು ಉಳಿದ ಐದು ಖಂಡದಲ್ಲಿ ವ್ಯಾಖ್ಯಾಪ್ರಜ್ಞಪ್ತಿಯನ್ನು ಆರನೆಯದಾಗಿ ಅಲ್ಲಿ ಇರಿಸಿದನು. ಈ ರೀತಿಯಾಗಿ ನಿಷ್ಪನ್ನವಾದ ಆರು ಖಂಡಗಳಿಗೆ ಹಾಗೂ ಕಷಾಯ ಪ್ರಾಭೃತಕ್ಕೆ ಪ್ರಾಕೃತಭಾಷೆಯಲ್ಲಿ ಉತ್ತಮವಾದ ಅರವತ್ತು ಸಹಸ್ರ ಗ್ರಂಥ ಪ್ರಮಾಣದ ಪುರಾತನ ವ್ಯಾಖ್ಯಾನವನ್ನು ಬರೆದನು. ಮಹಾಬಂಧ(ಕ್ಕೆ?)ದಲ್ಲಿ ಎಂಟುಸಾವಿರದ ಐದು (೮೦೦೫)ಗ್ರಂಥ ಪ್ರಮಾಣದ ವ್ಯಾಖ್ಯಾನವನ್ನು ಬರೆದನು. ಇದು ಇಂದ್ರನಂದಿಯವರ ಶ್ರುತಾವತಾರದ ಕಥನ.